# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಅಕ್ಟೋಬರ್ 25, 2024

ಸಂಪುಟ : 51 ಸಂಚಿಕೆ : 162 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



ಮದುವೆ ಹಾಗೂ ಶುಭಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ

BSC B.S. CHANNABASAPPA & SONS Since - 1938

ಬಿ.ಎಸ್.ಚನ್ನಬಸಪ್ಪ & ಸನ್ಸ್ ದಾವಣಗೆರೆ

ಕಾಳಿಕಾದೇವಿ ರಸ್ತೆ | ಪಿ ಜೆ ಬಡಾವಣೆ | ಡೆಂಟಲ್ ಕಾಲೇಜ್ ರಸ್ತೆ


## ಕನ್ನಡ ಜ್ಯೋತಿ ರಥಯಾತ್ರೆಗೆ ಸ್ವಾಗತ



ದಾವಣಗೆರೆ,ಅ. 24- ನಗರಕ್ಕೆ ಇಂದು ಆಗಮಿಸಿದ ಕನ್ನಡ ರಥಯಾತ್ರೆಯನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು. ಮಂಡ್ಯದಲ್ಲಿ ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆ ರಾಜ್ಯಾದ್ಯಂತ ಸಂಚರಿಸುತ್ತಿದೆ.

ರಥಯಾತ್ರೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಾಮದೇವಪ್ಪ, ಕನ್ನಡಪರ ಸಂಘಟನೆಯ ಮುಖಂಡರಾದ ಕೆ.ಜಿ.ಶಿವಕುಮಾರ್, ಕೆ.ಜಿ.ಯಲ್ಲಪ್ಪ, ಎಂ.ಎಸ್. ರಾಮೇಗೌಡ, ನಾಗೇಂದ್ರ ಬಂಡೀಕರ್, ರೈತ ಕಾರ್ಮಿಕ ಸಂಘಟನೆ ಮುಖಂಡರು, ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.

## ಮಹಾರಾಷ್ಟ್ರದಲ್ಲಿ ವಂಶಾಡಳಿತ ಸರ್ವವ್ಯಾಪಿ

### ಎಲ್ಲ ಪಕ್ಷಗಳಿಂದಲೂ ಅಧಿಕಾರಸ್ಥರ ಕುಟುಂಬದವರಿಗೆ ಮಣೆ

ಮುಂಬೈ, ಅ. 24 - ರಾಜಕೀಯ ಪಕ್ಷಗಳು ಬೇರೆಯವರ ವಿರುದ್ಧ ವಂಶಾಡಳಿತದ ಆರೋಪ ಮಾಡುತ್ತವೆ. ಆದರೆ ಟಿಕೆಟ್ ಹಂಚಿಕೆ ವಿಷಯ ಬಂದಾಗ ರಾಜಕೀಯ ಕುಟುಂಬಗಳಿಗೆ ಮಣೆ ಹಾಕಲು ಹಿಂಜರಿಯುವುದಿಲ್ಲ. ಇದಕ್ಕೆ ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಮತ್ತೊಂದು ಉದಾಹರಣೆಯಾಗಿದೆ.

ನವೆಂಬರ್ 20ರಂದು ರಾಜ್ಯದ 288 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ರಾಜ್ಯದ ಎಲ್ಲಾ ಪ್ರಮುಖ ಪಕ್ಷಗಳು ಈಗಾಗಲೇ ಕನಿಷ್ಠ ಮೊದಲ ಸುತ್ತಿನ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿವೆ. ಈ ಪಟ್ಟಿಯಲ್ಲಿ ಹಾಲಿ ಸಚಿವರು, ಶಾಸಕರು ಇಲ್ಲವೇ ಸಂಸದರ ಕುಟುಂಬದ ಸದಸ್ಯರು ಸಾಕಷ್ಟು ಸ್ಥಾನ ಪಡೆದಿದ್ದಾರೆ. ರಾಜಕೀಯ ಕುಟುಂಬಗಳ ಪುತ್ರ, ಪುತ್ರಿ, ಪತ್ನಿ ಇಲ್ಲವೇ ಸಹೋದರ - ಸಹೋದರಿಯರಿಗೆ ಅವಕಾಶ ಕಲ್ಪಿಸಲಾಗಿದೆ.

ಕಳೆದ ಲೋಕಸಭಾ ಚುನಾವಣೆ ವೇಳೆ ಬಿಜೆಪಿಗೆ ಸೇರ್ಪಡೆಯಾಗಿದ್ದ ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ ಅವರ ಪುತ್ರಿ ಶ್ರೀಜಯ ಚವ್ಹಾಣ್ ಬಿಜೆಪಿಯ ಟಿಕೆಟ್ ಪಡೆದಿದ್ದಾರೆ. ಅವರು ಕುಟುಂಬದ



ಸಾಂಪ್ರದಾಯಿಕ ಕ್ಷೇತ್ರವಾದ ನಾಂದೇಡ್ ಜಿಲ್ಲೆಯ ಭೋಕರ್‌ನಿಂದ ಸ್ಪರ್ಧಿಸಲಿದ್ದಾರೆ.

ಮುಂಬೈ ಬಿಜೆಪಿ ಅಧ್ಯಕ್ಷ ಆಶಿಶ್ ಶೆಲಾರ್ ಸಹೋದರ ವಿನೋದ್ ಶೆಲಾರ್ ಅವರು ಮಲಾಡ್ ಪಶ್ಚಿಮ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಆಶಿಶ್ ಶೆಲಾರ್ ಅವರು ಮುಂಬೈನ ಬಾಂದ್ರಾ ಪಶ್ಚಿಮ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಲಿದ್ದಾರೆ.

ಕಲ್ಯಾಣ್ ಪೂರ್ವ ಕ್ಷೇತ್ರದಿಂದ ಬಿಜೆಪಿ ನಾಯಕ ಗಣಪತ್ ಗಾಯಕ್ವಾಡ್ ಅವರ ಪತ್ನಿ ಸುಲಭ ಸ್ಪರ್ಧಿಸಲಿದ್ದಾರೆ. ಗಾಯಕ್ವಾಡ್ ಅವರು ಶಿವಸೇನೆ ಕಾರ್ಯಕರ್ತನ ಮೇಲೆ ಗುಂಡು ಹಾರಿಸಿದ ಪ್ರಕರಣದಲ್ಲಿ ಸಿಲುಕಿ ಜೈಲು ಪಾಲಾಗಿದ್ದಾರೆ.

ಮಾಜಿ ಕೇಂದ್ರ ಸಚಿವ ಹಾಗೂ ಲೋಕಸಭಾ ಸದಸ್ಯ ನಾರಾಯಣ ರಾಣೆ ಅವರ ಪುತ್ರ ನಿತೇಶ್ ಅವರು ಪ್ರಸಕ್ತ ಕಂಕವ್ಲಿ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಅವರ ಅಣ್ಣ ನೀಲೇಶ್ ಅವರು ಶಿವಸೇನೆಯಿಂದ ಕುಡಲ್ ಕ್ಷೇತ್ರದಲ್ಲಿ ಸ್ಪರ್ಧಿಸಲಿದ್ದಾರೆ.

ಪುಣೆ ಜಿಲ್ಲೆಯ ಚಿಚ್ವಾಡ ಕ್ಷೇತ್ರಕ್ಕಾಗಿ ಬಿಜೆಪಿಯ ಟಿಕೆಟ್ ಪಕ್ಷದ ದಿವಂಗತ ನಾಯಕ ಲಕ್ಷ್ಮಣ್ ಜಗತಾಪ್ ಅವರ ಸಹೋದರ ಶಂಕರ್ ಜಗತಾಪ್ ಅವರಿಗೆ ನೀಡಲಾಗಿದೆ. ಲಕ್ಷ್ಮಣ್ ಜಗತಾಪ್ ಅವರ ಪತ್ನಿ ಅಶ್ವಿನಿ ಜಗತಾಪ್ ಪ್ರಸಕ್ತ ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ.

ಶಿವಸೇನೆ ಶಿಂಧೆ ಬಣದಿಂದ ರಾಜ್ಯ ಸಚಿವ ಉದಯ್ ಸಾಮಂತ್ ಅವರ ಸಹೋದರ ಕಿರಣ್ ಸಾಮಂತ್ ಅವರಿಗೆ ರಾಜಪುರ ಕ್ಷೇತ್ರದ ಟಿಕೆಟ್ ನೀಡಲಾಗಿದೆ.

ಶಿವಸೇನೆ ನಾಯಕರಾದ ಸಂದೀಪನ್ ಭುಮರೆ ಅವರ ಪುತ್ರ ವಿಲಾಸ್ ಹಾಗೂ ರವೀಂದ್ರ ವಾಲ್ಕರ್ ಅವರ ಪತ್ನಿ ಮನಿಶಾ ಅವರು ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಆಡಳಿತಾರೂಢ ಬಣದಲ್ಲಿರುವ ಎನ್.ಸಿ.ಪಿ.ಯು ಪಂಕಜ್ ಭುಜ್ಬಲ್ ಅವರಿಗೆ ಟಿಕೆಟ್ ನೀಡಿದೆ. ಅವರು ಪಕ್ಷದ ಹಿರಿಯ ನಾಯಕ ಛಗನ್ ಭುಜ್ಬಲ್ ಅವರ ಪುತ್ರ. ಭುಜ್ಬಲ್ ಅವರ ಸೋದರ ಸಂಬಂಧಿ ಸಮೀರ್ ಅವರು ಸ್ವತಂತ್ರವಾಗಿ ಸ್ಪರ್ಧಿಸುವ ಸಾಧ್ಯತೆ ಇದೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಬಣದಿಂದ ಉದ್ಧವ್ ಠಾಕ್ರೆ ಪುತ್ರ ಆದಿತ್ಯ ಠಾಕ್ರೆ ಅವರು ಮುಂಬೈನ ವೊರ್ಲಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಅವರ ಸಂಬಂಧಿ ವರುಣ್ ಸರ್‌ದೇಸಾಯಿ ಅವರು ಬಾಂದ್ರಾ ಪೂರ್ವದಿಂದ ಸ್ಪರ್ಧಿಸಿದ್ದಾರೆ.

ಶಿವಸೇನೆ (ಯುಬಿಟಿ)ಯ ರಾಜ್ಯಸಭಾ ಸದಸ್ಯರಾಗಿರುವ ಸಂಜಯ್ ರಾವತ್ ಅವರ ಸಹೋದರ ಸುನೀಲ್ ರಾವತ್ ಅವರು ಮುಂಬೈನ ವಿಕ್ರೋಲಿಯಿಂದ ಸ್ಪರ್ಧಿಸಲಿದ್ದಾರೆ.

ಎನ್.ಸಿ.ಪಿ. (ಎಸ್. (3ನೇ ಪುಟಕ್ಕೆ)

## ಎಲ್ಲೆಂದರಲ್ಲಿ ಕಸ ಹಾಕಿದರೆ ದಂಡ ಗ್ಯಾರಂಟಿ

### ಸ್ವಚ್ಛತೆ ನಿರ್ವಹಣೆಗಾಗಿ ಮಾರ್ಷಲ್‌ಗಳ ನಿಯೋಜನೆ: ಮೇಯರ್ ಚಮನ್ ಸಾಬ್

ದಾವಣಗೆರೆ, ಅ. 24- ಮಹಾನಗರ ಪಾಲಿಕೆ ವತಿಯಿಂದ ಪ್ರತಿ ವಾರ್ಡ್‌ಗಳಲ್ಲೂ ಕಸ ಸಂಗ್ರಹದ ವಾಹನಗಳು ಬಂದರೂ ಸಹ ಕೆಲವರು ರಸ್ತೆ, ಖಾಲಿ ನಿವೇಶ ಸೇರಿದಂತೆ ಎಲ್ಲೆಂದರಲ್ಲಿ ಕಸ ಹಾಕುವುದು ಕಂಡು ಬಂದರೆ ದಂಡ ವಿಧಿಸಲಾಗುವುದು ಎಂದು ಮೇಯರ್ ಕೆ. ಚಮನ್ ಸಾಬ್ ಹೇಳಿದರು.

ಮಹಾನಗರ ಪಾಲಿಕೆಯ ತಮ್ಮ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲೆಂದರಲ್ಲಿ ಕಸ ಹಾಕುವುದನ್ನು ತಡೆಯಲು ಮತ್ತು ನಗರ ಸ್ವಚ್ಛತೆ ಹಿನ್ನೆಲೆಯಲ್ಲಿ ನಿವೃತ್ತ ಯೋಧರನ್ನು 'ಮಾರ್ಷಲ್' ಗಳನ್ನು ಗಸ್ತು ನಿಯೋಜನೆ ಮಾಡಲಾಗುವುದು. 20 ಮಾರ್ಷಲ್‌ಗಳನ್ನು ಪಾಲಿಕೆ ವತಿಯಿಂದ ನೇಮಕ ಮಾಡಿಕೊಳ್ಳಲಾಗುವುದು ಎಂದರು.



ರಸ್ತೆಯಲ್ಲಿ ಕಸ ಹಾಕುವವರಿಗೆ ಒಂದು ಬಾರಿಗೆ 500, 2 ನೇ ಬಾರಿಗೆ 1000 ಮತ್ತು 2000 ರೂ. ದಂಡ ವಿಧಿಸಲಾಗುವುದು. ಪಾಲಿಕೆಯಲ್ಲಿ ಇನ್ನೂ 420 ಪೌರ ಕಾರ್ಮಿಕರ ಕೊರತೆ ಇದ್ದು, ಈ ಬಗ್ಗೆ ಇದೇ ದಿನಾಂಕ 29 ರಂದು ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗಿ ನೇಮಕಾತಿಗೆ ಒತ್ತಾಯಿಸಲಾಗುವುದು ಎಂದು ಚಮನ್ ಸಾಬ್ ತಿಳಿಸಿದರು.

ನವೆಂಬರ್ ತಿಂಗಳನ್ನು 'ಸ್ವಚ್ಛತಾ ಮಾಸ' (3ನೇ ಪುಟಕ್ಕೆ)

### ವಾರ್ಡ್ ವಾರು ಇ-ಆಸ್ತಿ ಆಂದೋಲನ

ನವೆಂಬರ್ ತಿಂಗಳಿನಿಂದ ಪ್ರತಿ ವಾರ್ಡ್‌ಗಳಲ್ಲೂ ಇ-ಆಸ್ತಿ ಆಂದೋಲನ ಪ್ರಾರಂಭಿಸಲಾಗುವುದು. ಎಲ್ಲಾ ಆಸ್ತಿ ಮಾಲೀಕರು ಆಸ್ತಿ ತೆರಿಗೆ ಪಾವತಿಸಿದ ಚಲನ್, ಇಸಿ, ಮನೆಗೆ ಸಂಬಂಧಿಸಿದ ದಾಖಲೆಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು. ಪಾಲಿಕೆಯಿಂದ ಆಂದೋಲನದ ವೇಳಾಪಟ್ಟಿಯನ್ನು ಪ್ರಕಟಿಸಿದ ನಂತರ ನಿಗದಿತ ದಿನಾಂಕಗಳಂದು ಆಯಾ ವಾರ್ಡ್‌ಗಳಲ್ಲಿ ಸ್ಥಳದಲ್ಲಿಯೇ ಇ-ಸ್ವತ್ತು ನೀಡಲಾಗುವುದು ಎಂದು ಮೇಯರ್ ಚಮನ್ ಸಾಬ್ ಹಾಗೂ ಆಯುಕ್ತರಾದ ರೇಣುಕ ತಿಳಿಸಿದರು. ಖಾಲಿ ನಿವೇಶನಗಳ ಮಾಲೀಕರು ತಮ್ಮ ನಿವೇಶನಗಳಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ತಾವೇ ಸ್ವಚ್ಛಗೊಳಿಸಬೇಕು. ತಪ್ಪಿದಲ್ಲಿ ಮಹಾನಗರ ಪಾಲಿಕೆಯಿಂದ ದಂಡ ವಿಧಿಸಲಾಗುವುದು ಎಂದು ಹೇಳಿದರು.

### ಜಲಸಿರಿ ಬಿಲ್ ಪಾವತಿಸುವುದು ಕಡ್ಡಾಯ

ಈಗಾಗಲೇ 14 ವಲಯಗಳಲ್ಲಿ ಜಲಸಿರಿ ಯೋಜನೆ ಆರಂಭವಾಗಿದ್ದು, ಎರಡು ದಿನಗಳಿಗೊಮ್ಮೆ ನೀರು ಸರಬರಾಜಾಗುತ್ತಿದೆ. ಪ್ರಸ್ತುತ ಅಕ್ಟೋಬರ್ ಬಿಲ್ ಹೊರತುಪಡಿಸಿ, ಹಿಂದಿನ ಬಿಲ್ ಸೇರಿ ನವೆಂಬರ್ ತಿಂಗಳಲ್ಲಿ ಪಾವತಿಸುವುದು ಕಡ್ಡಾಯವಾಗಿರುತ್ತದೆ. ಬಿಲ್‌ನಲ್ಲಿ ವ್ಯತ್ಯಾಸ ಕಂಡು ಬಂದರೆ, ಹೆಚ್ಚುವರಿ ಬಂದಿದ್ದರೆ ತಮ್ಮನ್ನು ಸಂಪರ್ಕಿಸುವಂತೆ ಆಯುಕ್ತರು ತಿಳಿಸಿದರು. ಜಲಸಿರಿ ಹೆಚ್ಚಿನ ಬಿಲ್ ಬಂದಲ್ಲಿ, ನಳ ಸಂಪರ್ಕ ಇತ್ಯಾದಿ ತೊಂದರೆಗಳು ಕಂಡು ಬಂದಲ್ಲಿ 9036544419 ಗೆ ಕರೆ ಮಾಡುವಂತೆ (3ನೇ ಪುಟಕ್ಕೆ)

## ದ.ಕೊರಿಯಾದ ಅಧ್ಯಕ್ಷರ ಭವನದಲ್ಲಿ ಕಸ ಎಸೆದ ಉ.ಕೊರಿಯಾ!

### ಮತ್ತೆ ಆರಂಭವಾದ ಶೀತಲ ಸಮರ ಕಾಲದ ಸಂಘರ್ಷ

ಸಿಯೋಲ್, ಅ. 24 - ಉತ್ತರ ಕೊರಿಯಾದಿಂದ ಹಾರಿ ಬಿಡಲಾಗಿದ್ದ ಕಸದ ಬಲೂನೊಂದು ದಕ್ಷಿಣ ಕೊರಿಯಾದ ಅಧ್ಯಕ್ಷರ ಭವನದ ಆವರಣದಲ್ಲಿ ಬಿದ್ದಿದೆ. ಇದರಿಂದಾಗಿ ದಕ್ಷಿಣ ಕೊರಿಯಾದ ಸುರಕ್ಷತೆಯ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ.

ಇತ್ತೀಚಿನ ದಿನಗಳಲ್ಲಿ ಉತ್ತರ ಹಾಗೂ ದಕ್ಷಿಣ ಕೊರಿಯಾಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ. ದಕ್ಷಿಣ ಕೊರಿಯಾದ ಡ್ರೋನ್‌ಗಳು ಪ್ರಚಾರದ ಕರಪತ್ರಗಳನ್ನು ತನ್ನ ರಾಜಧಾನಿ ಪ್ಯಾಂಗ್ಯಾಂಗ್‌ನಲ್ಲಿ ಹರಡಿದೆ ಎಂದು ಉತ್ತರ ಕೊರಿಯಾ ಆರೋಪಿಸಿತ್ತು.

ಕೆಲ ತಿಂಗಳ ಹಿಂದೆ ಗಡಿಗಳಲ್ಲಿ ಉತ್ತರ ಕೊರಿಯಾ ಹಾಗೂ ದಕ್ಷಿಣ ಕೊರಿಯಾಗಳು ಲೌಡ್‌ಸ್ಪೀಕರ್‌ಗಳ ಮೂಲಕ ತಮ್ಮ ಪ್ರಚಾರ ಅಭಿಯಾನ ನಡೆಸಿದ್ದವು. ಶೀತಲ ಸಮರದ ನಂತರ ಇದೇ ಮೊದಲ ಬಾರಿಗೆ ಇಂತಹ ಪ್ರಚಾರ ನಡೆಸಲಾಗಿತ್ತು.

ಉತ್ತರ ಕೊರಿಯಾದ ಬಲೂನುಗಳು ಗುರುವಾರ ಬೆಳಿಗ್ಗೆ ದಕ್ಷಿಣ ಕೊರಿಯಾ ಅಧ್ಯಕ್ಷರ ಭವನದ ಆವರಣದಲ್ಲಿ ಕಸ ಎಸೆದಿವೆ. ಇದರಲ್ಲಿ ಯಾವುದೇ ಅಪಾಯಕಾರಿ ವಸ್ತುಗಳು ಕಂಡು ಬಂದಿಲ್ಲ ಎಂದು ಭದ್ರತಾ ಸಂಸ್ಥೆಗಳು ತಿಳಿಸಿವೆ.

ಕಳೆದ ಮೇ ತಿಂಗಳಲ್ಲೂ ಸಹ ಉತ್ತರ ಕೊರಿಯಾದಿಂದ ಕಸವಿರುವ ಸಾವಿರಾರು ಬಲೂನುಗಳನ್ನು ದಕ್ಷಿಣ ಕೊರಿಯಾದ ಕಡೆ ಬಿಡಲಾಗಿತ್ತು. ಆಗಲೂ ಹಲವು ಬಲೂನುಗಳು ದಕ್ಷಿಣ ಕೊರಿಯಾದ ಅಧ್ಯಕ್ಷರ ಭವನದ ಆವರಣದಲ್ಲಿ ಬಿದ್ದಿದ್ದವು. ಈ ಘಟನೆ ನಡೆದಾಗ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು ಭವನದಲ್ಲಿದ್ದರೇ ಎಂಬುದು ಸ್ಪಷ್ಟವಾಗಿಲ್ಲ.

ಯೂನ್ ಹಾಗೂ ಅವರ ಪತ್ನಿ ಕಿಮ್ ಕಿಯೂನ್ ಹೀ ಅವರನ್ನು ಟೀಕಿಸುವ ಕರಪತ್ರಗಳನ್ನೂ ಸಹ ಉತ್ತರ ಕೊರಿಯಾದ ಬಲೂನುಗಳ ಮೂಲಕ ಹರಡಲಾಗಿತ್ತು. ಉತ್ತರ ಕೊರಿಯಾದ ಪ್ರಚಾರದ ಕರಪತ್ರಗಳನ್ನು ಬಲೂನುಗಳ ಮೂಲಕ ಹರಡುತ್ತಿರುವುದು ಇದೇ ಮೊದಲು ಎಂದು ವರದಿಗಳು ತಿಳಿಸಿವೆ.

ಸುಧಾರಿತ ಡ್ರೋನ್‌ಗಳ ಮೂಲಕ ನಿರ್ದಿಷ್ಟ ಗುರಿ ಮೇಲೆ ಕರಪತ್ರಗಳನ್ನು ತಲುಪಿಸುವ ಸಾಮರ್ಥ್ಯ ಉತ್ತರ ಕೊರಿಯಾಗೆ ಇಲ್ಲ. ದೊಡ್ಡ ಪ್ರಮಾಣದಲ್ಲಿ ಬಲೂನುಗಳನ್ನು ತೇಲಿ ಬಿಡಲಾಗುತ್ತಿದೆ. ಅವು ಗಾಳಿ ಬೀಸಿದ ಕಡೆ ತೆರಳುತ್ತಿವೆ ಎಂದು ದಕ್ಷಿಣ ಕೊರಿಯಾದ ವಿಜ್ಞಾನ ಮತ್ತು ತಂತ್ರಜ್ಞಾನ ನೀತಿ ಸಂಸ್ಥೆಯ ಲೀ ಚೂನ್ ಗ್ಯೂನ್ ಹೇಳಿದ್ದಾರೆ.

## ಆವಿಷ್ಕಾರಕ್ಕೆ ಹೆಚ್ಚಿನ ಆದ್ಯತೆ ನೀಡಿ: ಸುಬ್ರಮಣ್ಯಂ

ದಾವಣಗೆರೆ, ಅ. 24 - ಶಿಕ್ಷಣ ಈಗ ಜ್ಞಾನದಿಂದ ಆವಿಷ್ಕಾರದ ಕಡೆ ಸಾಗುತ್ತಿದೆ. ಅದಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳೂ ಆವಿಷ್ಕಾರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ ಎಂದು ಬೆಂಗಳೂರಿನ ಐ.ಐ.ಎಸ್.ಸಿ. ನಿವೃತ್ತ ಉಪನ್ಯಾಸಕ ಡಾ. ಡಿ.ಕೆ. ಸುಬ್ರಮಣ್ಯಂ ಹೇಳಿದ್ದಾರೆ.



ನಗರದ ಬಿಐಇಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರ್ಸ್ (ಐಇಇಇ) ಪ್ರಥಮ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಜಿನಿಯರಿಂಗ್ ವಲಯ ಯಾವುದೇ ಗಡಿ ಹೊಂದಿಲ್ಲ. ಕೃತಕವಾಗಿ ವಿವಿಧ ವಿಭಾಗಗಳಿಗೆ ಗಡಿಗಳನ್ನು ರೂಪಿಸಲಾಗಿದೆ. ಸಿವಿಲ್, ಮೆಕ್ಯಾನಿಕಲ್, ಕಂಪ್ಯೂಟರ್ ಇತ್ಯಾದಿ ವಿಭಾಗಗಳು ಸಂಪೂರ್ಣ ಸ್ವತಂತ್ರವಾಗಿಲ್ಲ. ಅವುಗಳು ಪರಸ್ಪರ ಅವಲಂಬಿ ಎಂದು ತಿಳಿಸಿದರು.

### ತಿಂಗಳ ಮೊಬೈಲ್ ಬಿಲ್ ಸೈಟ್‌ನಷ್ಟೇ ದುಬಾರಿಯಾಗಿದ್ದಾಗ

ದಾವಣಗೆರೆಯಲ್ಲಿ ಮೊದಲು ಮೊಬೈಲ್ ಸೇವೆ ಆರಂಭಿಸಿದ್ದ ಸ್ಪೈಸ್ ಎಂಬ ಕಂಪನಿ. ಆಗ ಒಳ ಬರುವ ಕರೆಗಳಿಗೆ 16 ರೂ.ಗಳನ್ನು ಪಾವತಿಸಬೇಕಿತ್ತು. ಆ ಕಾಲದಲ್ಲಿ ತಮ್ಮ ತಿಂಗಳ ಮೊಬೈಲ್ ಬಿಲ್ 40 ಸಾವಿರ ರೂ.ಗಳವರೆಗೆ ತಲುಪುತ್ತಿತ್ತು ಎಂದು ಬಿಐಇಟಿ ಪ್ರಾಂಶುಪಾಲ ಹೆಚ್.ಬಿ. ಅರವಿಂದ ಹೇಳಿದರು. ಈಗ ಮೊಬೈಲ್ ಬಿಲ್ 600 ರೂ. ದಾಟುವುದಿಲ್ಲ. ಬಹುಶಃ ಭಾರತದಲ್ಲಿ ಇಷ್ಟೊಂದು ಬೆಲೆ ಕಡಿಮೆ ಆಗಿರುವ ಸೇವೆ ಅಂದರೆ ಇದೊಂದೇ ಇರಬೇಕು. ಆ ಕಾಲದಲ್ಲಿ ತಿಂಗಳಿಗೆ ಆಗುತ್ತಿದ್ದ ಮೊಬೈಲ್ ಬಿಲ್ ವೆಚ್ಚದಲ್ಲಿ ಶಾಮನೂರಿನಲ್ಲಿ ಒಂದು ನಿವೇಶನವನ್ನೇ ಖರೀದಿಸಬಹುದಿತ್ತು ಎಂದು ಚಟಾಕಿ ಹಾರಿಸಿದರು.

ಯಾವುದೇ ಆವಿಷ್ಕಾರಕ್ಕೆ ಹಲವು ವಲಯಗಳ ಜ್ಞಾನ ಅಗತ್ಯವಾಗಿದೆ. ಹೀಗಾಗಿ ಬಹುಶಾಸ್ತ್ರೀಯ ಅಧ್ಯಯನಕ್ಕೆ ಒತ್ತು ನೀಡುವ ಅಗತ್ಯವಿದೆ ಎಂದು ಹೇಳಿದರು. ಸಾಧಾರಣ (3ನೇ ಪುಟಕ್ಕೆ)

## ಆಸ್ತಿ ಧ್ವಂಸ ತಡೆ ಅರ್ಜಿಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಅ. 24 - ಉತ್ತರಾಖಂಡ, ರಾಜಸ್ಥಾನ ಹಾಗೂ ಉತ್ತರ ಪ್ರದೇಶಗಳಲ್ಲಿ ಅಕ್ರಮ ಆಸ್ತಿಗಳ ಧ್ವಂಸಕ್ಕಾಗಿ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ತಡೆಯಬೇಕು ಎಂಬ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಈ ವಿಷಯದಲ್ಲಿ ನೇರ ಇಲ್ಲವೇ ಪರೋಕ್ಷವಾಗಿ ಸಂಬಂಧಿಸದ ವ್ಯಕ್ತಿಯಿಂದ ದಾಖಲಾಗುವ ಅರ್ಜಿಯ ವಿಚಾರಣೆ ನಡೆಸುವುದಿಲ್ಲ ಎಂದು ನ್ಯಾಯೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಕೆ. ಮಿಶ್ರ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ನಾವು ಪೆಂಡೋರಾ ಪೆಟ್ಟಿಗೆ ತೆರೆಯಲು ಬಯಸುವುದಿಲ್ಲ. ಯಾರಿಗೆ ಸಮಸ್ಯೆಯಾಗಿದೆಯೋ ಅವರು ಅರ್ಜಿ ದಾಖಲಿಸಲಿ ಎಂದು ನ್ಯಾಯಾಲಯ ಹೇಳಿದೆ.

ಹರಿದ್ವಾರ, ಜೈಪುರ ಹಾಗೂ ಕಾನ್ಪುರಗಳಲ್ಲಿ ಆಸ್ತಿಗಳ ಧ್ವಂಸಕ್ಕೆ ಮುಂದಾಗಲಾಗಿದೆ. ಇದು ಸುಪ್ರೀಂ ಕೋರ್ಟ್ (2ನೇ ಪುಟಕ್ಕೆ)

## ಸಚಿವ, ಶಾಸಕರ ಹೆಸರಿನಲ್ಲಿ ನಕಲಿ ವಾಟ್ಸ್‌ಆಪ್ ಖಾತೆ

ಪಣಜಿ, ಅ. 24 - ಗೋವಾ ಸಾರಿಗೆ ಸಚಿವ ಮೌವಿನ್ ಗೊಡಿನ್ಹೋ ಹಾಗೂ ಬಿಜೆಪಿ ಶಾಸಕ ನೀಲೇಶ್ ಕ್ಯಾಬ್ರಲ್ ಅವರ ಹೆಸರಿನಲ್ಲಿ ನಕಲಿ ವಾಟ್ಸ್‌ಆಪ್ ಖಾತೆಗಳನ್ನು ತೆರೆದಿರುವ ವಂಚಕರು, ಜನರಿಂದ ಹಣ ಕೇಳಿದ ಘಟನೆ ನಡೆದಿದೆ.

ನಕಲಿ ವಾಟ್ಸ್‌ಆಪ್ ಖಾತೆಗಳ ಬಗ್ಗೆ ಪೊಲೀಸರಲ್ಲಿ ದೂರು ದಾಖಲಿಸಲಾಗಿದೆ ಎಂದು ಬಿಜೆಪಿ ನಾಯಕರೂ ಆಗಿರುವ ಸಚಿವ ಗೊಡಿನ್ಹೊ ಹೇಳಿದ್ದಾರೆ. ಶೀಘ್ರದಲ್ಲೇ ದೂರು ನೀಡುವುದಾಗಿ ಕ್ಯಾಬ್ರಲ್ ತಿಳಿಸಿದ್ದಾರೆ.

## ಆಧಾರ್ ಕಾರ್ಡ್ ವಯಸ್ಸಿನ ಪುರಾವೆ ಅಲ್ಲ

ನವದೆಹಲಿ, ಅ. 22 - ಆಧಾರ್ ಕಾರ್ಡ್ ವಯಸ್ಸಿನ ಪುರಾವೆ ಅಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಆಧಾರ್ ಕಾರ್ಡ್‌ನಲ್ಲಿ ನಮೂದಿಸಿರುವ ವಯಸ್ಸಿನ ಆಧಾರದ ಮೇಲೆ ರಸ್ತೆ ಅಪಘಾತದ ಸಂತ್ರಸ್ತರ ವಯಸ್ಸು ನಿರ್ಧರಿಸುವ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಶಾಲೆಯ ವರ್ಗಾವಣೆ ಪ್ರಮಾಣ ಪತ್ರದ ಆಧಾರದ ಮೇಲೆ ವಯಸ್ಸು ನಿರ್ಧರಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಆಧಾರ್ ಕಾರ್ಡ್ ಅನ್ನು ವ್ಯಕ್ತಿಯ ಗುರುತು ನಿರ್ಧರಿಸಲು ಮಾತ್ರ ಬಳಸಬೇಕು. ಇದು ವಯಸ್ಸಿನ ಪುರಾವೆ ಅಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

## ತುಂಬಿಗೇರಿಯಲ್ಲಿ ವಾಂತಿ-ಬೇಧಿ ಪ್ರಕರಣ

## ಶಾಸಕರ ಭೇಟಿ : ಪಿಡಿಓ ಸಸ್ಪೆಂಡ್



ಹರಪನಹಳ್ಳಿ, ಅ.24- ತಾಲ್ಲೂಕಿನ ಟಿ. ತುಂಬಿಗೇರಿ ಗ್ರಾಮದಲ್ಲಿನ ವಾಂತಿ-ಬೇಧಿ ಪ್ರಕರಣದಿಂದಲೇ ಇಬ್ಬರು ಸಾವಿಗೀಡಾಗಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ ಹಿನ್ನೆಲೆಯಲ್ಲಿ, ವಿಜಯನಗರ ಜಿಲ್ಲಾ ಪಂಚಾಯ್ತಿ ಸಿಇಓ ಅವರು ತುಂಬಿಗೇರಿ ಗ್ರಾಮ ಒಳಪಡುವ ರಾಗಿಮಸಲವಾಡ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಎಸ್.ಶ್ರೀನಿವಾಸ ಅವರನ್ನು ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ.

ಮಂಗಳವಾರ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ, ಕೂಡಲೇ ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸಂಬಂಧ ಪಟ್ಟ ಅಧಿಕಾರಿಗಳ ಬಳಿ ಚರ್ಚೆ ನಡೆಸಿದ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸಾಮಗ್ರಿಗಳು ಗ್ರಾಮಕ್ಕೆ ಆಗಮಿಸಿದವು.

ಈ ವೇಳೆ ಪೈಪ್ ಲೈನ್ ಬದಲಾವಣೆಗೆ ಸೂಚಿಸಿದ ಶಾಸಕರು, 2-3 ಕಡೆ ಸಿಸಿ ರಸ್ತೆ, ಚರಂಡಿ ಕಾಮಗಾರಿ ಗಳನ್ನು ಅತಿ (2ನೇ ಪುಟಕ್ಕೆ)

# ಮಲೇಬೆನ್ನೂರು - ಜಿಗಳಿ ರಸ್ತೆ ಪೂರ್ಣಗೊಳಿಸಲು ಸಂಸದರ ಸೂಚನೆ



ಮಲೇಬೆನ್ನೂರು, ಅ.24- ಅಪೂರ್ಣ ಗೊಂಡಿರುವ ಮಲೇಬೆನ್ನೂರು - ಜಿಗಳಿ ರಸ್ತೆ ಪೂರ್ಣಗೊಳಿಸಲು ತಕ್ಷಣ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಲೊಕೋಪಯೋಗಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ಜಿಗಳಿ ಗ್ರಾಮಸ್ಥರು ಸಂಸದರನ್ನು ಅವರ ಗೃಹ ಕಛೇರಿಯಲ್ಲಿ ಭೇಟಿ ಮಾಡಿ ಮಲೇಬೆನ್ನೂರಿನಿಂದ ಜಿಗಳಿ ಸಂಪರ್ಕಿಸುವ ಸುಮಾರು 3 ಕಿ.ಮೀ. ರಸ್ತೆಯ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗೆ ಟೆಂಡರ್ ಆಗಿತ್ತು.

ಟೆಂಡರ್ ಆಗಿರುವ ಗುತ್ತಿಗೆದಾರರು ಕಾಮಗಾರಿಯನ್ನು ಆರಂಭಿಸಿ, ಅರ್ಧ ಕೆಲಸ ಮಾಡಿ ಹಾಗೆಯೇ ಬಿಟ್ಟು ಹೋಗಿದ್ದಾರೆ. ಈ ಬಗ್ಗೆ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಸಾಕಷ್ಟು ಬಾರಿ ತಿಳಿಸಿದ್ದರೂ ಪ್ರಯೋಜನ ಆಗಿಲ್ಲ.

ಎಸ್. ರಾಮಪ್ಪ ಅವರು ಶಾಸಕರಿದ್ದಾಗ ಈ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ, ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದರು. ಕೆಲಸ ಆರಂಭಿಸಿ 3 ವರ್ಷಗಳಾದರೂ ಕಾಮಗಾರಿ ಪೂರ್ಣಗೊಳಿಸಿಲ್ಲ. ಜಿಲ್ಲಾ ಮುಖ್ಯ ರಸ್ತೆಯಾಗಿರುವ ಈ ರಸ್ತೆ ಹಲವಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಈಗ ಆಗಿರುವ ಕಾಮಗಾರಿಯಿಂದಾಗಿ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆ ಆಗಿದೆ ಎಂಬುದನ್ನು ಗ್ರಾಮಸ್ಥರು ಸಂಸದರಿಗೆ ವಿವರಿಸಿದರು.

ಗ್ರಾಮಸ್ಥರ ಸಮಸ್ಯೆಯನ್ನು ಆಲಿಸಿದ ಸಂಸದರು, ಕೆಲಸ ಅರ್ಧ ಮಾಡಿ ಹೋಗಿರುವ ಗುತ್ತಿಗೆದಾರರನ್ನು ಹುಡುಕಿ ತರುವಂತೆ ಎಸ್ಪಿಗೆ ದೂರು ಕೊಡಿ ಅಥವಾ ಪುನಃ ಟೆಂಡರ್ ಕರೆದು ಕಾಮಗಾರಿ ಪೂರ್ಣಗೊಳಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದರು.

**ರೈತರನ್ನು ಒಕ್ಕಲೆಬ್ಬಿಸಬೇಡಿ:** ಜಿಗಳಿ ಗ್ರಾಮದಲ್ಲಿ 40 ವರ್ಷಗಳ ಹಿಂದೆ ಸರ್ಕಾರದಿಂದಲೇ ಕಾನೂನು ಪ್ರಕಾರ ಹಂಚಿಕೆ ಮಾಡಿರುವ 44 ಜನರ ಜಮೀನುಗಳನ್ನು ವಾಪಸ್ ಪಡೆಯುವ ಕುರಿತು ದಿಢೀರ್ ನೋಟೀಸ್ ನೀಡಿರುವ ಕ್ರಮ ಸರಿ ಇಲ್ಲ ಎಂದು ಪ್ರಭಾ ಅವರು ಉಪವಿಭಾಗಾಧಿಕಾರಿಗಳಿಗೆ ಹೇಳಿದರು.

44 ಬಡ ರೈತರು ಸರ್ಕಾರ ನೀಡಿರುವ ಆ ಅರ್ಧ ಎಕರೆ ಜಮೀನಿನಲ್ಲೇ ಜೀವನ ನಡೆಸುತ್ತಿದ್ದಾರೆ. ನೀವು ಈಗ ಏಕಾಏಕಿ ಸರ್ವೇ ಮಾಡಿಸಿ, ಅಲ್ಲಿ ಕೆರೆ ಇತ್ತು, ಹಾಗಾಗಿ ಆ ಕೆರೆ ಜಮೀನುಗಳನ್ನು ವಾಪಸ್ ಪಡೆಯುತ್ತೇವೆ ಎನ್ನುವ ನಿಮ್ಮ ಈ ಉದ್ದೇಶ ಎಷ್ಟರ ಮಟ್ಟಿಗೆ ಸರಿ ಇದೆ ಎಂದು ಸಂಸದರು ಪ್ರಶ್ನಿಸಿದರು.

ಈ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರ ಬಳಿ ಮಾತನಾಡುತ್ತೇವೆ. ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಿ ಎಂದರು.

ಜಿಗಳಿ ಗ್ರಾಮದ ಇಂದೂಧರ್ ಎನ್. ರುದ್ರೇಗೌಡ, ಜಿ. ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಜಿ.ಆರ್. ನಾಗರಾಜ್, ಡಿ.ರವೀಂದ್ರಪ್ಪ, ಪತ್ರಕರ್ತ ಪ್ರಕಾಶ್ ಸೇರಿದಂತೆ 44 ರೈತರು ಈ ವೇಳೆ ಹಾಜರಿದ್ದರು.

## ದಲಿತರ ಮೇಲಿನ ದೌರ್ಜನ್ಯ : 98 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

ಕೊಪ್ಪಳ, ಅ. 24 – ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದ ದಲಿತರ ಮೇಲಿನ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ 98 ಅಪರಾಧಿಗಳಿಗೆ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ. ಇನ್ನೂ ಮೂವರಿಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

2014ರಲ್ಲಿ ನಡೆದ ಸವರ್ಣೀಯರು ಮತ್ತು ದಲಿತರ ನಡುವೆ ಗಲಾಟೆ ಪ್ರಕರಣದಲ್ಲಿ 101 ಜನರು ದೋಷಿಗಳು ಎಂದು ಕೊಪ್ಪಳದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತಿಳಿಸಿತ್ತು. ಶಿಕ್ಷೆಯ ಪ್ರಮಾಣವನ್ನು ಗುರುವಾರ ಪ್ರಕಟಿಸಲಾಗಿದೆ.

ಜೀವಾವಧಿ ಶಿಕ್ಷೆಗೊಳಗಾದ 98 ಅಪರಾಧಿಗಳಿಗೆ ತಲಾ ಐದು ಸಾವಿರ ರೂ. ಹಾಗೂ ಇನ್ನು ಮೂವರು ಅಪರಾಧಿಗಳಿಗೆ ತಲಾ ಎರಡು ಸಾವಿರ ರೂ. ದಂಡ ವಿಧಿಸಲಾಗಿದೆ.

2014 ರ ಆಗಸ್ಟ್ 28 ರಂದು ಮರಕುಂಬಿ ಸವರ್ಣೀಯರು ಮತ್ತು ದಲಿತರ ನಡುವೆ ಗಲಾಟೆ ನಡೆದಿತ್ತು. ಅಂದು ಗ್ರಾಮದ ಸವರ್ಣೀಯರು, ದಲಿತರ ಕೇರಿಗೆ ನುಗ್ಗಿ ದಾಂಧಲೆ ಮಾಡಿ, ಗುಡಿಸಲುಗಳಿಗೆ ಬೆಂಕಿ ಹಚ್ಚಿದ್ದರು.

## ರಾಜನಹಳ್ಳಿ ಮಠದಲ್ಲಿ ಇಂದು ಸಭೆ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಸಮಾಜದ ಪ್ರಸ್ತುತ ಜ್ವಲಂತ ಸಮಸ್ಯೆಗಳ ಕುರಿತು ಚರ್ಚಿಸಲು ರಾಜ್ಯಮಟ್ಟದ ಸಭೆ ಕರೆಯಲಾಗಿದೆ.

## ಕೃತಕ ಬುದ್ಧಿವಂತಿಕೆ ಹೂಡಿಕೆಗಾಗಿ ಎನ್‌ವಿಡಿಯಾ - ರಿಲೈಯನ್ಸ್ ಒಪ್ಪಂದ

ಮುಂಬೈ, ಅ. 24 - ಭಾರತದಲ್ಲಿ ಕೃತಕ ಬುದ್ಧಿವಂತಿಕೆ ಮೂಲಭೂತ ಸೌಲಭ್ಯ ಹಾಗೂ ಅನ್ವೇಷಣಾ ಕೇಂದ್ರ ಸ್ಥಾಪಿಸಲು ರಿಲೈಯನ್ಸ್ ಜೊತೆಗೆ ಎನ್‌ವಿಡಿಯಾ ಕಂಪನಿ ಒಪ್ಪಂದ ಮಾಡಿಕೊಂಡಿದೆ.

ಎನ್‌ವಿಡಿಯಾದ ಬ್ಲಾಕ್‌ವೆಲ್ ಎಐ ಚಿಪ್ ಉದ್ದೇಶಕ್ಕಾಗಿ ರಿಲೈಯನ್ಸ್ ಇಂಡಸ್ಟ್ರೀಸ್ ಹೊಂದಿರುವ ಹೊಸ ಡಾಟಾ ಸೆಂಟರ್ ಬಳಸಲಾಗುವುದು ಎಂದು ಎನ್‌ವಿಡಿಯಾ ಸಿಇಒ ಜೆನ್ಸೆನ್ ಹುವಾಂಗ್ ತಿಳಿಸಿದ್ದಾರೆ.

ದೇಶದ ಆರು ಕಡೆ ಎನ್‌ವಿಡಿಯಾ ಈಗಾಗಲೇ ತನ್ನ ಕಾರ್ಯನಿರ್ವಹಣೆ ಹೊಂದಿದೆ. ಉದ್ಯಮಗಳ ಸೇವೆ, ಕ್ಲೌಡ್ ಸೇವೆ ಹಾಗೂ ನವೋದ್ಯಮಗಳಲ್ಲಿ ಎನ್‌ವಿಡಿಯಾ ಕಾರ್ಯನಿರ್ವಹಿಸುತ್ತಿದೆ.

## ಆಸ್ತಿ ಧ್ವಂಸ ತಡೆ ಅರ್ಜಿಗೆ ಸುಪ್ರೀಂ ನಕಾರ

**(1ನೇ ಪುಟದಿಂದ)** ಆದೇಶದ ಉಲ್ಲಂಘನೆ ಎಂದು ಅರ್ಜಿದಾರರು ಹೇಳಿದ್ದರು. ವಿವಿಧ ಅಪರಾಧಿ ಪ್ರಕರಣಗಳಲ್ಲಿ ಆರೋಪಿಗಳಾಗಿರುವವರ ಆಸ್ತಿಗಳ ಧ್ವಂಸಕ್ಕೆ ರಾಜ್ಯ ಸರ್ಕಾರಗಳು ಮುಂದಾಗಿರುವುದಕ್ಕೆ ಸುಪ್ರೀಂ ಕೋರ್ಟ್ ಈ ಹಿಂದೆ ತಡೆಯಾಜ್ಞೆ ಹೊರಡಿಸಿತ್ತು. ಆದರೆ, ರಸ್ತೆ, ಫುಟ್‌ಪಾತ್, ರೈಲು ಇತ್ಯಾದಿ ಸಾರ್ವಜನಿಕ ಆಸ್ತಿಗಳನ್ನು ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳ ಧ್ವಂಸಕ್ಕೆ ಈ ತಡೆಯಾಜ್ಞೆ ಅನ್ವಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

## ಹೊನ್ನನಾಯ್ಕನಹಳ್ಳಿ : ರೈತನ ಆತ್ಮಹತ್ಯೆ



ಮಾಯಕೊಂಡ, ಅ.24- ರೈತ ಮಲ್ಲಿಕಾರ್ಜುನ ಅವರು ಆತ್ಮಹತ್ಯೆಗೊಳಗಾದ ಘಟನೆ ಸಮೀಪದ ಹೊನ್ನ ನಾಯ್ಕನಹಳ್ಳಿಯಲ್ಲಿ ಗುರುವಾರ ನಡೆದಿದೆ.

ಸಾಲಬಾಧೆ ಮತ್ತು ಬೆಳೆಹಾನಿಯಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ 3-4 ವರ್ಷಗಳಿಂದಲೂ ಬೆಳೆ ಹಾಳಾಗಿತ್ತು. ಈ ಬಾರಿ ಮಳೆ ಹೆಚ್ಚಾಗಿ, ನೀರು ನಿಂತು ಹತ್ತಿ ಬೆಳೆಯೂ ನಾಶವಾಗಿತ್ತು. ಬೆಳೆಗಾಗಿ ಐಡಿಎಫ್ ಸಿ ಬ್ಯಾಂಕಿನಲ್ಲಿ 2 ಲಕ್ಷ, ಗ್ರಾಮೀಣ ಒಕ್ಕೂಟದಲ್ಲಿ 70 ಸಾವಿರ, ಸೊಸೈಟಿಯಲ್ಲಿ 50 ಸಾವಿರ ಜತೆಗೆ ಊರಲ್ಲಿ ಮಾಡಿದ 2 ಲಕ್ಷ ಸೇರಿ ಒಟ್ಟು 5 ಲಕ್ಷ ಸಾಲ ಮಾಡಿರುತ್ತಾರೆ. ಬೆಳೆ ಬಾರದ್ದರಿಂದ ಸಾಲ ತೀರಿಸಲಾಗದೆ ನಮ್ಮ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅವರ ಮಗ ಅಜಯ್ ತಿಳಿಸಿದ್ದಾರೆ. ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

## ಹರಿಹರದಲ್ಲಿ ಕನ್ನಡ ರಥ ಯಾತ್ರೆಗೆ ಸ್ವಾಗತ



ಹರಿಹರ, ಅ. 24 - ಮಂಡ್ಯ ನಗರದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಾಡಿನ ಜನರಿಗೆ ಕನ್ನಡದ ಬಗ್ಗೆ ಜಾಗೃತಿ ಮೂಡಿಸುವ ಸಲವಾಗಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ರಥಯಾತ್ರೆ ನಗರಕ್ಕೆ ಗುರುವಾರ ಸಂಜೆ ಆಗಮಿಸಿತು.

ತಹಶೀಲ್ದಾರ್ ಗುರುಬಸವರಾಜ್ ಅವರು ತಾಯಿ ಭುವನೇಶ್ವರಿ ಮೂರ್ತಿಗೆ ಎಸ್.ಜೆ.ವಿ.ಪಿ. ಕಾಲೇಜು ಮುಂಭಾಗದಲ್ಲಿ ಹೂವಿನ ಹಾರವನ್ನು ಹಾಕುವುದರೊಂದಿಗೆ ವಿಶೇಷ ಪೂಜೆಯನ್ನು ಸಮರ್ಪಿಸಿ, ತೆಂಗಿನ ಕಾಯಿ ಒಡೆಯುವ ಮೂಲಕ ಜ್ಯೋತಿ ರಥದ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಡೊಳ್ಳು, ಶಾಲಾ ವಿದ್ಯಾರ್ಥಿಗಳ ಡ್ರಮ್ ಸೆಟ್, ವಾದಕಗಳು ಸೇರಿದಂತೆ ಇತರೆ ಕಲಾ ಮೇಳಗಳು ಮೆರವಣಿಗೆಗೆ ಮೆರಗನ್ನು ನೀಡಿದವು.

ಮೆರವಣಿಗೆ ಎಸ್.ಜೆ.ವಿ.ಪಿ. ಕಾಲೇಜು ಮುಂಭಾಗದಿಂದ ಆರಂಭಗೊಂಡು ಗಾಂಧಿ ವೃತ್ತದಲ್ಲಿ ಅಂತ್ಯಗೊಂಡಿತು. ಮೆರವಣಿಗೆ ಸಾಗುವ ವೇಳೆ ನಗರಸಭೆ, ತಾ.ಪಂ., ಶಿಕ್ಷಣ, ಸಿಡಿಪಿಓ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜ್ಯೋತಿ ರಥಕ್ಕೆ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ಸುಮಲತ, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಬಿಇಓ ಡಿ. ದುರ್ಗಪ್ಪ, ಸಿಡಿಪಿಓ ಪೂರ್ಣಿಮಾ, ಕಾರ್ಮಿಕ ಇಲಾಖೆ ಕವಿತಾ, ಬೆಸ್ಕಾಂ ಇಲಾಖೆ ಮಾರ್ಕಂಡೇಯ, ಎಎಸ್ಐ ಶ್ರೀಪತಿ ಗಿನ್ನಿ, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ, ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಹಿರಿಯ ಸಾಹಿತಿಗಳಾದ ಪ್ರೊ ಎಸ್.ಎ. ಭಿಕ್ಷಾವರ್ತಿ ಮಠ, ಜೆ.ಕಲಿಂ ಬಾಷಾ, ಹೆಚ್.ಕೆ. ಕೊಟ್ರಪ್ಪ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಗೌರವ ಕಾರ್ಯದರ್ಶಿ ಬಿ.ಬಿ. ರೇವಣ್ಣನಾಯ್ಕ್, ಎಂ. ಚಿದಾನಂದ ಕಂಚಿಕೇರಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ನಾಮ ನಿರ್ದೇಶನ ಸದಸ್ಯ ಕೆ.ಬಿ. ರಾಜಶೇಖರ್, ಶೇಖರಗೌಡ ಪಾಟೀಲ್, ಹೆಚ್.ಸಿ. ಕೀರ್ತಿಕುಮಾರ್, ಕರಿಬಸಪ್ಪ ಕಂಚಿಕೇರಿ, ಸುರೇಶ್ ಕುಣೆಬೆಳಕೇರಿ, ವಿಶ್ವನಾಥ, ಆರ್. ಮಂಜುನಾಥ್, ಕೃಷ್ಣ ರಾಜೊಳ್ಳಿ, ಈಶಪ್ಪ ಬೂದಿಹಾಳ್, ಶಿವಮೂರ್ತಿ, ಪ್ರವೀಣ್ ಗೌಡ, ಎಂ.ಎಸ್. ಆನಂದ್, ಗುರುಬಸವರಾಜ್, ಸಂತೋಷ ಗುಡಿಮನಿ, ಯಮನೂರು ಕನ್ನಡಪರ ಸಂಘಟನೆ ಮುಖಂಡ ಹೆಚ್. ಸುಧಾಕರ್, ರಮೇಶ್ ಮಾನೆ, ಪ್ರೀತಂ ಬಾಬು, ಇಲಿಯಾಸ್ ಆಹ್ಮದ್, ವಿ.ಎ. ಹೇಮಂತ್ ಕುಮಾರ್, ಸಮೀರ್, ಸೀತಾ ನಾರಾಯಣ, ಗೀತಾ ಕೊಂಡಜ್ಜಿ, ರಾಗಿಣಿ ಇತರರು ಹಾಜರಿದ್ದರು.

## ಶಾಸಕರ ಭೇಟಿ : ಪಿಡಿಓ ಸಸ್ಪೆಂಡ್

**(1ನೇ ಪುಟದಿಂದ)** ಶೀಘ್ರದಲ್ಲೇ ಮಾಡಿಸಿಕೊಡಲಾಗುವುದು. ಹೊಸ ಸಾರಿಗೆ ಬಸ್‌ಗಳನ್ನು ಈ ಗ್ರಾಮಕ್ಕೆ ಬಿಡಿಸಲಾಗುವುದು ಎಂದು ಭರವಸೆ ನೀಡಿದರು.

ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಮನೆ - ಮನೆಗೆ ತೆರಳಿ ಜನರಿಗೆ ಸ್ವಚ್ಛತೆ ಕುರಿತು ಅರಿವು ಮೂಡಿಸಬೇಕು ಎಂದು ಸೂಚಿಸಿದರು. ಬ್ಲೀಚಿಂಗ್ ಪೌಡರ್ ಸಿಂಪರಣೆ, ತಿಪ್ಪೆಗಳನ್ನು ತೆಗೆಸಲು ಗ್ರಾಮ ಪಂಚಾಯ್ತಿಯವರಿಗೆ ಸೂಚಿಸಿದರು.

ಮೃತ ವ್ಯಕ್ತಿಗಳ ಕುಟುಂಬಕ್ಕೆ ಪರಿಹಾರ ನೀಡುವಂತೆ ಗ್ರಾಮಸ್ಥರು ಮನವಿ ಮಾಡಿದಾಗ ಶಾಸಕರು ವೈದ್ಯಕೀಯ ವರದಿ ನೋಡಿ, ಅಧಿಕಾರಿಗಳ ಬಳಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಪುರಸಭಾ ಸದಸ್ಯರಾದ ವೆಂಕಟೇಶ್, ಗಣೇಶ್, ಲಾಟಿ ದಾದಾಪೀರ್, ಮುಖಂಡರಾದ ವಸಂತಪ್ಪ, ಎಲ್.ಮಂಜಾನಾಯ್ಕ ತಹಶೀಲ್ದಾರ್ ಗಿರೀಶ್‌ಬಾಬು, ತಾ.ಪಂ ಇಒ ಚಂದ್ರಶೇಖರ, ಪೊಲೀಸ್ ವೃತ್ತ ನಿರೀಕ್ಷಕ ನಾಗರಾಜ್ ಎಂ. ಕಮ್ಮಾರ, ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಎಇಇ ಕಿರಣಕುಮಾರನಾಯ್ಕ, ಪಿಎಸ್‌ಗಳಾದ ಶಂಭುಲಿಂಗ ಹಿರೇಮಠ, ಕಿರಣಕುಮಾರ, ನರೇಗಾ ಸಹಾಯಕ ನಿರ್ದೇಶಕ ಸೋಮಶೇಖರ್ ಈ ಸಂದರ್ಭದಲ್ಲಿದ್ದರು.

## ಯತ್ನಾಳ್, ಸಿ.ಟಿ. ರವಿ, ಸೂಲಿಬೆಲೆ ವಿರುದ್ಧ ದೂರು



ದಾವಣಗೆರೆ, ಅ.24- ಒಂದು ಸಮುದಾಯವನ್ನು ಅವಮಾನಿಸುವ ರೀತಿಯಲ್ಲಿ ಹೇಳಿಕೆ ನೀಡಿರುವ ಹಾಗೂ ಸಮಾಜದಲ್ಲಿ ಸಾಮರಸ್ಯವನ್ನು ಕದಡುವ ಪ್ರಯತ್ನ ನಡೆಸುವ ರೀತಿಯಲ್ಲಿ ಹೇಳಿಕೆ ನೀಡಿದರೆನ್ನಲಾದ ಬಸವರಾಜ ಪಾಟೀಲ್ ಯತ್ನಾಳ್ ಮತ್ತು ಸಿ.ಟಿ. ರವಿ ಹಾಗೂ ಚಕ್ರವರ್ತಿ ಸೂಲಿಬೆಲೆ ಅವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಲಾಯಿತು.

ಈ ಸಂದರ್ಭದಲ್ಲಿ ಅಬ್ದುಲ್ ಘನಿ ತಾಹೇರ್, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಇಸ್ಮಾಯಿಲ್ ಖಾನ್, ವಕೀಲ ಹನೀಫ್, ವಕೀಲ ಖಲೀಲ್, ನಿವೃತ್ತ ಎಎಸ್ಐ ನಬಿ ಖಾನ್, ಕಲಾಂ ಉಪಸ್ಥಿತರಿದ್ದರು.

## ಬೆಳೆ ವಿಮೆ ಬಾಕಿ; ಕಂಪನಿಯ ಕಳ್ಳ ಮಾರ್ಗದ ಯತ್ನ ಕೈಗೂಡದು

### ಹೆದ್ದಾರಿ ತಡೆ ಪ್ರತಿಭಟನೆಯಲ್ಲಿ ರೈತ ಮುಖಂಡ ರವೀಂದ್ರಗೌಡ ಪಾಟೀಲ ಎಚ್ಚರಿಕೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಅ.24- ಕಳೆದ ಸಾಲಿನಲ್ಲಿ ಅದೂ ಬರಗಾಲವೆಂದು ಘೋಷಿಸಿದಾಗಲೂ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ನಿಯಮಾವಳಿ ಪ್ರಕಾರ ಬೆಳೆ ವಿಮೆ ಮಾಡಿಸಿದ ರೈತರಿಗೆ ಪರಿಹಾರ ನೀಡದೇ ರಿಲಯನ್ಸ್ ಇನ್ಸೂರೆನ್ಸ್ ಕಂಪನಿ ಈಗ ಕಳ್ಳ ಮಾರ್ಗಗಳನ್ನು ಹುಡುಕಿ ಶೇ. 75 ಬಾಕಿ ಹಣ ಜಮಾ ಮಾಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವುದು ರೈತರನ್ನು ರೊಚ್ಚಿಗೆಬ್ಬಿಸಿದೆ. ಕಂಪನಿಯ ಹುನ್ನಾರ ನಡೆಯಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಎಚ್ಚರಿಸಿದ್ದಾರೆ. ಬೆಳೆ ವಿಮೆ ತಾರತಮ್ಯ ನೀತಿ ಖಂಡಿಸಿ ನ್ಯಾಯಕ್ಕಾಗಿ ಜಿಲ್ಲಾದ್ಯಂತ ಹೋರಾಟ ನಡೆಸಲಾಗುತ್ತಿದೆ. ಸರತಿಯಂತೆ ಹೆಡಿಯಾಲ ಗ್ರಾಮ ಪಂಚಾಯತಿಗೆ ಬೀಗ ಜಡಿದು, ಹರಿಹರ-ಸಮ್ಮಸಗಿ ರಾಜ್ಯ ಹೆದ್ದಾರಿಯನ್ನು ಹೆಡಿಯಾಲ ಹತ್ತಿರ ತಡೆದು ಪ್ರತಿಭಟನೆ ನಡೆಸಿ ಮಾತನಾಡಿದ ಅವರು ಜಿಲ್ಲಾಡಳಿತ ಈ ಸಂಬಂಧ ಮೈಚಳಿ ಬಿಡದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ, ಜಿಲ್ಲಾಡಳಿತ ರೈತರ ಈ ಸಮಸ್ಯೆಯನ್ನು ತುರ್ತು ಇತ್ಯರ್ಥಪಡಿಸದಿದ್ದರೆ ಶಿಗ್ಗಾಂವ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯನ್ನು ಬಹಿಷ್ಕರಿಸಿ, ಚುನಾವಣಾ ಕಾರ್ಯಕ್ಕೆ ಅಡೆತಡೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಂದಾಯ ಇಲಾಖೆಯ ಅಶೋಕ ಅರಳೇಶ್ವರ, ಕೃಷಿ ಇಲಾಖೆಯ ಎಂ. ಅರವಿಂದ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಸುರೇಶ ಮಡ್ಲೂರ್, ಲಕ್ಷ್ಮಣ ಚೌಟಿ, ಸುರೇಶ ಚಪ್ಪರದಹಳ್ಳಿ, ಶಿವಕುಮಾರ ಜ್ಯೋತಿ, ಹೇಮಪ್ಪ ಮಾರೇರ, ಮಹೇಶಪ್ಪ ಮಾಸಣಗಿ, ಈರಪ್ಪ ಗಂಗಣ್ಣನವರ, ಬಸಪ್ಪ ಹೊಳಲವರ, ನಾಗಪ್ಪ ಅರಳಿ, ಬಸನಗೌಡ ಪಾಟೀಲ, ಮಹೇಶಪ್ಪ ಮಳಿಯಪ್ಪನವರ, ವಿರುಪಾಕ್ಷಪ್ಪ ಅರಳಿ, ಶಂಭು ಮಾಸಣಗಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಹರಪನಹಳ್ಳಿ : ಸತ್ತೂರಿನಲ್ಲಿ ಬಸ್ ಪಲ್ಟಿ, ಮಹಿಳೆ ಸಾವು

ಹರಪನಹಳ್ಳಿ, ಅ.22- ಕೆಎಸ್ಸಾರ್ಟಿಸಿ ಬಸ್ ಪಲ್ಟಿಯಾಗಿ ಮಹಿಳೆ ಸಾವಿಗೀಡಾಗಿರುವ ಘಟನೆ ಸತ್ತೂರು ಬಳಿ ಜರುಗಿದೆ. ದಾವಣಗೆರೆಯಿಂದ ಹರಪನಹಳ್ಳಿಗೆ ಹೋಗುತ್ತಿದ್ದ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕ ಪಲ್ಟಿಯಾಗಿದೆ. ಸತ್ತೂರಿನ ಹನುಮಕ್ಕ (45) ಮೃತಪಟ್ಟಿದ್ದು, ಉಳಿದಂತೆ 20 ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯಗಳಾಗಿವೆ. ಒಬ್ಬರ ಸ್ಥಿತಿ ಗಂಭೀರವಾಗಿದ್ದು, ಗಾಯಾಳುಗಳನ್ನು ದಾವಣಗೆರೆ ಜಿಲ್ಲಾಸ್ಪತ್ರೆ ಸೇರಿಸಲಾಗಿದೆ.

## ದೇಶದ ಕಂಪ್ಯೂಟಿಂಗ್ ಸಾಮರ್ಥ್ಯ 2024ರಲ್ಲಿ 20 ಪಟ್ಟು ಹೆಚ್ಚಳ : ಎನ್‌ವಿಡಿಯಾ

ಮುಂಬೈ, ಅ. 24 - 2024ರಲ್ಲಿ ಭಾರತದ ಕಂಪ್ಯೂಟಿಂಗ್ ಸಾಮರ್ಥ್ಯ 20 ಪಟ್ಟು ಹೆಚ್ಚಾಗಲಿದೆ. ಶೀಘ್ರವೇ ಭಾರತದಿಂದ ಪರಿಣಾಮಕಾರಿ ಎ.ಐ. ಉತ್ಪನ್ನಗಳು ರಫ್ತಾಗಲಿವೆ ಎಂದು ಎನ್‌ವಿಡಿಯಾ ಸ್ಥಾಪಕ ಹಾಗೂ ಸಿಇಒ ಜೆನ್ಸೆನ್ ಹುವಾಂಗ್ ಹೇಳಿದ್ದಾರೆ.

ಎನ್‌ವಿಡಿಯಾ ಎ.ಐ. ಸಮ್ಮಿಟ್ 2024 ಸಮಾರಂಭದಲ್ಲಿ ಮಾತನಾಡಿದ ಹುವಾಂಗ್, ವಿಶ್ವದ ಕಂಪ್ಯೂಟರ್ ಉದ್ಯಮಕ್ಕೆ ಭಾರತ ಆಪ್ತವಾಗಿದೆ. ಭಾರತದಲ್ಲಿ ತನ್ನ ವ್ಯವಸ್ಥೆ ವಿಸ್ತರಿಸಲು ಎನ್‌ವಿಡಿಯಾ ಬದ್ಧವಾಗಿದೆ ಎಂದಿದ್ದಾರೆ.

ಭಾರತ ಜಾಗತಿಕ ಕಂಪ್ಯೂಟಿಂಗ್ ಉದ್ಯಮಕ್ಕೆ ಅತ್ಯಂತ ನಿಕಟವಾಗಿದೆ. ಐ.ಟಿ. ಉದ್ಯಮದ ಕೇಂದ್ರವಾಗಿದೆ. ಭಾರತದಲ್ಲಿ ಎನ್‌ವಿಡಿಯಾ ವ್ಯವಸ್ಥೆ ಅತ್ಯಂತ ಸಮೃದ್ಧವಾಗಿದೆ. 2024ರಲ್ಲಿ ಭಾರತದಲ್ಲಿ ಕಂಪ್ಯೂಟಿಂಗ್ ಸಾಮರ್ಥ್ಯ 20 ಪಟ್ಟು ಹೆಚ್ಚಾಗಲಿದೆ ಎಂದವರು ಅಂದಾಜಿಸಿದ್ದಾರೆ.

ಕಂಪ್ಯೂಟರ್ ವಲಯ ಈಗ ಎ.ಐ. ಕಾರಣದಿಂದ ಹೊಸ ಯುಗವನ್ನು ಕಾಣುತ್ತಿದೆ. ಪ್ರಸಕ್ತ ಭಾರತ ಸಾಫ್ಟ್‌ವೇರ್ ರಫ್ತು ದೇಶವಾಗಿದೆ. ಮುಂದಿನ ದಿನಗಳಲ್ಲಿ ಎ.ಐ. ಅಭಿವೃದ್ಧಿ ಹಾಗೂ ಪೂರೈಕೆಯ ಸಶಕ್ತ ದೇಶವಾಗಲಿದೆ ಎಂದಿದ್ದಾರೆ.


ಭಾರತ ಈಗ ಸಾಫ್ಟ್‌ವೇರ್ ಉತ್ಪಾದನೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಮುಂದಿನ ಪೀಳಿಗೆಯು ಎ.ಐ. ಉತ್ಪಾದನೆ ಹಾಗೂ ಪೂರೈಕೆಯಲ್ಲಿ ತೊಡಗಲಿದೆ. ಇದು ದೊಡ್ಡ ಬದಲಾವಣೆಗೆ ಕಾರಣವಾಗಲಿದೆ ಎಂದು ಹುವಾಂಗ್ ತಿಳಿಸಿದ್ದಾರೆ.

ಎ.ಐ. ಕಾರಣದಿಂದ ಉದ್ಯೋಗಗಳು ಸಂಪೂರ್ಣವಾಗಿ ಕುಸಿತವಾಗುವುದಿಲ್ಲ. ಉದ್ಯೋಗ ಮಾಡುವ ವಿಧಾನ ಬದಲಾಗಲಿದೆ. ಎ.ಐ. ನೆರವಿನಿಂದ ದಕ್ಷವಾಗಿ ಕಾರ್ಯನಿರ್ವಹಿಸುವವರು ಉದ್ಯೋಗ ಪಡೆಯಬಹುದು ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

## ಡೆಮೋ ವಿಶೇಷ ರೈಲುಗಳ ಸಂಚಾರ ರದ್ದು

ದಾವಣಗೆರೆ, ಅ.24- ತಾಂತ್ರಿಕ ಮತ್ತು ಕಾರ್ಯಾಚರಣೆಯ ಕಾರಣಗಳಿಂದಾಗಿ, ರೈಲು ಸಂಖ್ಯೆ 07395 ಬಳ್ಳಾರಿ-ದಾವಣಗೆರೆ ಡೆಮೊ ಸ್ಪೆಷಲ್, ರೈಲು ಸಂಖ್ಯೆ 07396 ದಾವಣಗೆರೆ-ಬಳ್ಳಾರಿ ಡೆಮೊ ಸ್ಪೆಷಲ್, ರೈಲು ಸಂಖ್ಯೆ 07397 ಹೊಸಪೇಟೆ-ಬಳ್ಳಾರಿ ಡೆಮೊ ಸ್ಪೆಷಲ್ ಮತ್ತು ರೈಲು ಸಂಖ್ಯೆ 07398 ಬಳ್ಳಾರಿ-ಹೊಸಪೇಟೆ ಡೆಮೊ ಸ್ಪೆಷಲ್ ರೈಲುಗಳನ್ನು ನಾಳೆ ದಿನಾಂಕ 25 ಮತ್ತು 26 ರಂದು ರದ್ದುಪಡಿಸಲಾಗಿದೆ ಮತ್ತು ರೈಲು ಸಂಖ್ಯೆ 07393 ಹೊಸಪೇಟೆ-ಎಸ್‌ಎಸ್‌ಎಸ್ ಹುಬ್ಬಳ್ಳಿ ಡೆಮೊ ಸ್ಪೆಷಲ್ ರೈಲನ್ನು ನಾಡಿದ್ದು ದಿನಾಂಕ 26, 2024 ರಂದು ರದ್ದುಗೊಳಿಸಲಾಗಿದೆ ಎಂದು ನೈರುತ್ಯ ರೈಲ್ವೆ, ಹುಬ್ಬಳ್ಳಿ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ ಕನಮಡಿ ತಿಳಿಸಿದ್ದಾರೆ.

## ಪರಮೇಶ್ವರಪ್ಪ ಕೆ.ಬಿ. ನಿಧನ



ದಾವಣಗೆರೆ ತಾಲ್ಲೂಕು, ಹೊಸನಾಯಕನಹಳ್ಳಿ ಗ್ರಾಮದ ವಾಸಿ ದಿ. ಕೆ.ಜಿ. ಬಸಪ್ಪನವರ ಪುತ್ರ

**ಪರಮೇಶ್ವರಪ್ಪ ಕೆ.ಬಿ.**

(64) ರವರು ದಿನಾಂಕ: 24-10-2024 ರ ಗುರುವಾರ ರಾತ್ರಿ 9.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 25-10-2024ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಮೃತರ ಸ್ವಗ್ರಾಮವಾದ ಹೊಸನಾಯಕನಹಳ್ಳಿ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :

**ಮಕ್ಕಳು - ರುದ್ರೇಶ್, ರಾಮಕೃಷ್ಣ, ಬಸವರಾಜ್, ಪ್ರದೀಪ್, ಪವಿತ್ರ, ಕೂಲಂಬಿ ವಂಶಸ್ಥರು.**

**ಹೊಸನಾಯಕನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

**ಮೊ: 83101 46851, 84950 95938**

## ಸೊಕ್ಕೆ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸೊಕ್ಕೆ ವಿ.ವಿ.ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

### ಯು.ಪಿ. ವೆಂಕಟೇಶ್ ನಿಧನ




ದಾವಗೆರೆ ಸಿಟಿ ಪಿ.ಜೆ. ಬಡಾವಣೆ 6ನೇ ಮೇನ್, 6ನೇ ಕ್ರಾಸ್, # 600/1 ವಾಸಿ ಯು.ಪಿ. ವೆಂಕಟೇಶ್ (57) ಇವರು ದಿನಾಂಕ : 24.10.2024ರ ಗುರುವಾರ ಸಂಜೆ 7 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ತಾಯಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 25.10.2024ರ ಶುಕ್ರವಾರ ಮಧ್ಯಾಹ್ನ 11.30ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.

### ಹೆಚ್.ಎಂ. ಸುರೇಶ್ ನಿಧನ



ದಾವಣಗೆರೆ ಸಿಟಿ ಬೂದಾಳ್ ರಸ್ತೆ ಕುರುಬರ ಕೇರಿ ವಾಸಿ ದಿ. ಮಾದೇವಪ್ಪ ಹೊನ್ನೂರಪ್ಪ ಇವರ ಪುತ್ರ ಹೆಚ್.ಎಂ. ಸುರೇಶ್ (59) ಇವರು ದಿನಾಂಕ 25.10.2024ರ ಬೆಳಿಗ್ಗೆ 12.15ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25.10.2024ರ ಶುಕ್ರವಾರ ಮಧ್ಯಾಹ್ನ 2ಕ್ಕೆ ಬೂದಾಳ್ ರಸ್ತೆಯ ಸಾರ್ವಜನಿಕ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಹರಿಹರ : ಸವಾರರಿಗೆ ಸವಾಲಾಗಿರುವ ಗುಂಡಿಗಳು..!



ಹರಿಹರ, ಅ.24- ನಗರದ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ದೊಡ್ಡ ಪ್ರಮಾಣದಲ್ಲಿ ಇರುವುದರಿಂದ, ವಾಹನ ಸವಾರರು ನಿರ್ಭಯವಾಗಿ ಓಡಾಡುವುದಕ್ಕೆ ಪರದಾಡುವಂತಾಗಿದೆ.

ಗಾಂಧಿ ವೃತ್ತ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ಆಟೋ ನಿಲ್ದಾಣ ಪಕ್ಕದ ರಸ್ತೆ, ಹರಪನಹಳ್ಳಿ ರಸ್ತೆ, ಸೇರಿದಂತೆ ಇತರೆ ರಸ್ತೆಗಳ ಗುಂಡಿಗಳು ವಾಹನ ಸವಾರರನ್ನು ಕಂಗೆಡಿಸಿವೆ.

ಕಳೆದ ಒಂದು ವಾರದಿಂದ ಧಾರಾಕಾರ ವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಈ ಗುಂಡಿಗಳು ಮತ್ತಷ್ಟು ದೊಡ್ಡದಾಗುತ್ತಿದ್ದು, ವಾಹನ ಸವಾರರು ಗುಂಡಿಗಳಿಗೆ ಬಿದ್ದು, ಕೈ-ಕಾಲುಗಳಿಗೆ ಗಾಯ ಮಾಡಿಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ಸಾಮಾನ್ಯವಾಗಿದೆ.

ಇತ್ತೀಚೆಗೆ ನಡೆದ ಕೆಡಿಪಿ ಸಭೆಯಲ್ಲಿ ತಾಲ್ಲೂಕಿನ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿಸಲು ಸರ್ಕಾರ 32 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡಿದೆ ಎಂದು ಅಧಿಕಾರಿಗಳು ಶಾಸಕರಿಗೆ ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕೂಡಲೇ ಎಲ್ಲ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಿಸಿ, ದುರಸ್ತಿ ಪಡಿಸಲು ಮುಂದಾಗಬೇಕಿದೆ.

ಈ ವೇಳೆ ಮಲನಾಯಕನಹಳ್ಳಿ ಅಂಬರೀಶ್ ಮಾತನಾಡಿ, ನಗರದಲ್ಲಿ ಯಾವುದೇ ರಸ್ತೆಗೆ ಹೋದರು ದೊಡ್ಡ ಪ್ರಮಾಣದಲ್ಲಿ ಗುಂಡಿಗಳು ಇರುವುದರಿಂದ ಹಗಲಿನಲ್ಲಿಯೇ ಓಡಾಡುವುದಕ್ಕೆ ಕಷ್ಟವಾಗುತ್ತದೆ. ಇನ್ನು ರಾತ್ರಿ ಸಮಯದಲ್ಲಿ ವಿದ್ಯುತ್ ಇಲ್ಲದೇ ಇರುವ ಸಮಯದಲ್ಲಿ ಓಡಾಡುವಾಗ ಅಪ್ಪಿತಪ್ಪಿ ಗುಂಡಿಯಲ್ಲಿ ಬಿದ್ದರೆ, ಪ್ರಾಣ ಕಳೆದುಕೊಳ್ಳುವಂತಹ ಸ್ಥಿತಿ ಬರಬಹುದು.

ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲೂ ಸಹ ಇದೇ ರೀತಿಯ ಗುಂಡಿಗಳು ಇರುವುದರಿಂದ ವಾಹನಗಳು ಓಡಾಡುವುದಕ್ಕೆ ಸಾಕಷ್ಟು ತೊಂದರೆಗಳಾಗುತ್ತವೆ ಎಂದು ಹೇಳಿದರು.

## ಸಂಕ್ಷಿಪ್ತ ಸುದ್ದಿ

☞ **ಬಾಹ್ಯಾಕಾಶ ನವೋದ್ಯಮಕ್ಕೆ ಸಾವಿರ ಕೋಟಿ ರೂ.**
ನವದೆಹಲಿ : ಬಾಹ್ಯಾಕಾಶ ವಲಯದ ನವೋದ್ಯಮಗಳಿಗೆ ನೆರವಾಗಲು ಸಾವಿರ ಕೋಟಿ ರೂ.ಗಳ ಬಂಡವಾಳ ನಿಧಿ ರೂಪಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದ ಈ ವಲಯದ 40 ಉದ್ಯಮಗಳಿಗೆ ನೆರವಾಗುವ ನಿರೀಕ್ಷೆ ಇದೆ.

☞ **ಕಟ್ಟಡ ಕುಸಿತದಲ್ಲಿ ಮೃತರ ಕುಟುಂಬಗಳಿಗೆ ಪ್ರಧಾನಿ, ಮುಖ್ಯಮಂತ್ರಿ ನೆರವು**
ಬೆಂಗಳೂರು: ಇಲ್ಲಿನ ಕಟ್ಟಡ ಕುಸಿತದಲ್ಲಿ ಮೃತಪಟ್ಟ ಜನರ ಕುಟುಂಬಗಳಿಗೆ ತಲಾ 5 ಲಕ್ಷ ರೂ.ಗಳ ನೆರವು ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಸಹ ಈ ಕುಟುಂಬಗಳಿಗೆ ತಲಾ 2 ಲಕ್ಷ ರೂ. ನೆರವು ನೀಡುವುದಾಗಿ ತಿಳಿಸಿದ್ದಾರೆ.

☞ **ಆಂಧ್ರ, ತೆಲಂಗಾಣ, ಬಿಹಾರ ರೈಲ್ವೆ ಯೋಜನೆಗಳಿಗೆ 6,798 ಕೋಟಿ ರೂ.**
ನವದೆಹಲಿ : ಆಂಧ್ರಪ್ರದೇಶ, ತೆಲಂಗಾಣ ಹಾಗೂ ಬಿಹಾರಗಳಿಗೆ ಸಂಬಂಧಿಸಿದ ಎರಡು ರೈಲ್ವೆ ಯೋಜನೆಗಳಿಗೆ ಕೇಂದ್ರ ಸಂಪುಟ 6,798 ಕೋಟಿ ರೂ.ಗಳನ್ನು ಪ್ರಕಟಿಸಿದೆ. ನರ್ಕತಿಯಾಗಂಜ್ - ರಕ್ಸೌಲ್ - ದರ್ಭಾಂಗ ಮತ್ತು ಸೀತಾಮಾರಿ - ಮುಜಾಫರಪುರ ಮಾರ್ಗದ ಡಬ್ಲಿಂಗ್‌ಗೆ ಅನುಮತಿ ನೀಡಲಾಗಿದೆ. ಎರುಪಲೇಂ ಹಾಗೂ ನಂಬುರು ನಡುವೆ ಅಮರಾವತಿ ಮೂಲಕ ಹೊಸ ರೈಲ್ವೆ ಮಾರ್ಗ ನಿರ್ಮಿಸಲಾಗುವುದು.

☞ **ದೀಪಾವಳಿಗೆ 7000 ವಿಶೇಷ ರೈಲು**
ನವದೆಹಲಿ : ದೀಪಾವಳಿ ಹಾಗೂ ಛಾತ್ ಹಬ್ಬದ ದಿನಗಳ ಹಿನ್ನೆಲೆಯಲ್ಲಿ ಏಳು ಸಾವಿರ ವಿಶೇಷ ರೈಲುಗಳ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ. ಇದು ಎರಡು ಲಕ್ಷ ಪ್ರಯಾಣಿಕರಿಗೆ ನೆರವಾಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

☞ **ನೀರಿನ ಟ್ಯಾಂಕ್ ಕುಸಿದು ಐವರ ಸಾವು**
ಪುಣೆ : ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪಿಂಪ್ರಿ ಚಿಂಚವಾಡ ನಗರದಲ್ಲಿ ನಿರ್ಮಾಣ ಹಂತದಲ್ಲಿದ್ದ ತಾತ್ಕಾಲಿಕ ನೀರಿನ ಟ್ಯಾಂಕ್ ಕುಸಿದು ಐವರು ಕಾರ್ಮಿಕರು ಸಾವನ್ನಪ್ಪಿದ್ದಾರೆ ಹಾಗೂ ಇತರೆ ಇವರು ಗಾಯಗೊಂಡಿದ್ದಾರೆ. ನೀರಿನ ಒತ್ತಡದ ಕಾರಣದಿಂದ ಈ ಅವಘಡ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

☞ **ಗಾಜಾಗೆ ಅಮೆರಿಕದಿಂದ 135 ದಶಲಕ್ಷ ಡಾಲರ್ ನೆರವು**
ಡೀರ್ ಅಲ್ ಬಲಾಹ್ : ಗಾಜಾಗೆ 135 ದಶಲಕ್ಷ ಡಾಲರ್ ನೆರವು ನೀಡಲಾಗುವುದು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್ ತಿಳಿಸಿದ್ದಾರೆ. ಆದರೆ, ಈ ನೆರವು ಗಾಜಾಗೆ ತಲುಪುವುದು ಬಹಳ ಮುಖ್ಯವಾಗಿದೆ ಎಂದವರು ಹೇಳಿದ್ದಾರೆ. ಗಾಜಾಗೆ ಮಾನವೀಯ ನೆರವು ತಲುಪಿಸಲು ಇಸ್ರೇಲ್ ಅವಕಾಶ ನೀಡಬೇಕು ಎಂದು ಅಮೆರಿಕ ಒತ್ತಾಯಿಸುತ್ತಾ ಬಂದಿದೆ.

☞ **ಇಸ್ರೇಲ್ ದಾಳಿಯಲ್ಲಿ ಲೆಬನಾನ್ ಸೈನ್ಯದ ಮೂವರ ಸಾವು**
ಬ್ಯೂರತ್ : ದಕ್ಷಿಣ ಲೇಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಸೈನಿಕ ಅಧಿಕಾರಿ ಸೇರಿದಂತೆ ಮೂವರು ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಲೆಬನಾನ್ ಸೈನ್ಯ ಹೇಳಿದೆ. ಗಾಯಗೊಂಡವರಿಗೆ ನೆರವು ನೀಡಲು ಸೈನಿಕರು ಮುಂದಾಗಿದ್ದ ಸಂದರ್ಭದಲ್ಲಿ ಈ ಸಾವುಗಳು ಸಂಭವಿಸಿವೆ. ಈ ಹಿಂದೆ ತನ್ನ ದಾಳಿಯಲ್ಲಿ ಲೆಬನಾನ್ ಸೈನಿಕರು ಸಾವನ್ನಪ್ಪಿದ್ದಕ್ಕಾಗಿ ಇಸ್ರೇಲ್ ಕ್ಷಮೆ ಯಾಚಿಸಿತ್ತು. ಲೆಬನಾನ್ ಸೈನ್ಯ ಹೆಚ್ಚು ಶಕ್ತಿಯುತವಾಗಿಲ್ಲ. ಹೆಜ್ಬುಲ್ಲಾ ಉಗ್ರರನ್ನು ನಿಯಂತ್ರಿಸಲು ಇಲ್ಲವೇ ಇಸ್ರೇಲ್ ನಡೆಸುವ ದಾಳಿಯನ್ನು ಎದುರಿಸುವ ಸಾಮರ್ಥ್ಯ ಹೊಂದಿಲ್ಲ.

☞ **ಲಿಂಕಡ್‌ಇನ್‌ಗೆ 310 ದಶಲಕ್ಷ ಯೂರೋ ದಂಡ**
ಲಂಡನ್ : ಯುರೋಪ್ ವಲಯದ ಕಠಿಣ ಖಾಸಗಿ ಮಾಹಿತಿ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಲಿಂಕಡ್‌ಇನ್‌ಗೆ ಯುರೋಪ್ ಒಕ್ಕೂಟದ ನಿಯಂತ್ರಕರು 310 ದಶಲಕ್ಷ ಯೂರೋಗಳ ದಂಡ ವಿಧಿಸಿದ್ದಾರೆ.

☞ **ಲೆಬನಾನ್‌ಗೆ ಫ್ರಾನ್ಸ್ ಹಾಗೂ ಇತರೆ ದೇಶಗಳ ನೆರವು**
ಪ್ಯಾರಿಸ್ : ಸಂಕಷ್ಟದಲ್ಲಿರುವ ಲೆಬನಾನ್ ದೇಶಕ್ಕೆ 100 ದಶಲಕ್ಷ ಯೂರೋ ನೆರವು ನೀಡುವುದಾಗಿ ಫ್ರಾನ್ಸ್ ತಿಳಿಸಿದೆ. ಲೆಬನಾನ್ ಹಾಗೂ ಸಿರಿಯಾ ದೇಶಗಳಿಗೆ 96 ದಶಲಕ್ಷ ಯೂರೋ ನೆರವು ನೀಡುವುದಾಗಿ ಜರ್ಮನಿ ಹೇಳಿದೆ. ಇಟಲಿ ಕಳೆದ ವಾರ 10 ದಶಲಕ್ಷ ಯೂರೋ ನೆರವು ನೀಡಿತ್ತು. ಆದರೆ, ಪಾರದರ್ಶಕತೆಯ ಕೊರತೆ ಹಾಗೂ ಭ್ರಷ್ಟಾಚಾರದ ಅಪಾಯದಿಂದಾಗಿ ಲೆಬನಾನ್ ಜನತೆಗೆ ಈ ನೆರವು ತಲುಪಿಸುವುದು ಸವಾಲಾಗಿದೆ.

☞ **70 ವಿಮಾನಗಳಿಗೆ ಬಾಂಬ್ ಬೆದರಿಕೆ**
ನವದೆಹಲಿ : ಗುರುವಾರದಂದು ದೇಶದ ಹಲವು ವಿಮಾನಯಾನ ಸಂಸ್ಥೆಗಳ 70ಕ್ಕೂ ಹೆಚ್ಚು ವಿಮಾನಗಳಿಗೆ ಬಾಂಬ್ ಬೆದರಿಕೆ ಎದುರಾಗಿದೆ ಎಂದು ಮೂಲಗಳು ತಿಳಿಸಿವೆ. ಕಳೆದ ವಾರದಿಂದ ವಿಮಾನಯಾನ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಬಾಂಬ್ ಬೆದರಿಕೆ ಎದುರಿಸುತ್ತಿವೆ.

# ನೌಕರರು ಪ್ರಾಮಾಣಿಕ ಹಾದಿಯಲ್ಲಿ ನಡೆಯಲಿ

ಬೆಂಗಳೂರು, ಅ. 24 - ಸರ್ಕಾರಿ ನೌಕರರು ಭ್ರಷ್ಟಾಚಾರ ತೊರೆದು ಪ್ರಾಮಾಣಿಕ ಹಾದಿಯಲ್ಲಿ ನಡೆದು, ತಮ್ಮ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಹಾಗೂ ಸಮಗ್ರತೆ ಪ್ರದರ್ಶಿಸಿ ದೇಶದ ಅಭಿವೃದ್ಧಿಗೆ ಪೂರಕವಾಗಬೇಕು ಎಂದು ಉಪಲೋಕಾಯುಕ್ತ, ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಇಂದಿಲ್ಲಿ ಕರೆ ಕೊಟ್ಟಿದ್ದಾರೆ.

ಸಾರ್ವಜನಿಕರ ಕುಂದು ಕೊರತೆ, ದೂರುಗಳ ವಿಚಾರಣೆ, ಪ್ರಕರಣಗಳ ವಿಲೇವಾರಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಸವಲತ್ತು ಪಡೆಯುವ ಹಕ್ಕು ಎಲ್ಲ ನಾಗರಿಕರಿಗೆ ಇದೆ, ಎಲ್ಲರಿಗೂ ಸಮಪಾಲು, ಸಮಬಾಳು ಎಂಬ ಸಂವಿಧಾನದ ಆಶೋತ್ತರದಡಿ ಲೋಕಾಯುಕ್ತ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು, ಜನರಿಗೆ ಸರ್ಕಾರದ ಸೌಲಭ್ಯಗಳನ್ನು ಕೊಡಿಸುವ ಕೆಲಸವನ್ನು ಮಾಡುತ್ತಿದೆ ಎಂದರು.

ಭ್ರಷ್ಟಾಚಾರದಿಂದ ದೇಶದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ, ಭ್ರಷ್ಟಾಚಾರ ನಿರ್ಮೂಲನೆ ಲೋಕಾಯುಕ್ತ ಸಂಸ್ಥೆಯ ಕಾರ್ಯೋದ್ದೇಶ, ಎಲ್ಲಿ ಕೆಲಸ ಆಗುತ್ತಿಲ್ಲ, ಯಾವ ಕೆಲಸ ವಿಳಂಬವಾಗುತ್ತಿದೆ ಎಂಬುದನ್ನು ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಸೌಲಭ್ಯ ಕಲ್ಪಿಸುವ ಕೆಲಸವನ್ನು ನಾವು ಮಾಡುತ್ತೇವೆ ಎಂದು ಹೇಳಿದರು.

## ರಾಣೇಬೆನ್ನೂರಿನಲ್ಲಿ ಇಂದಿನಿಂದ ಕಟ್ಟಡ ಸಾಮಗ್ರಿಗಳ ಪ್ರದರ್ಶನ

ಇಂದಿನಿಂದ ಮೂರು ದಿನಗಳ ಕಾಲ ಮೃತ್ಯುಂಜಯ ಕಲ್ಯಾಣ ಮಂಟಪದಲ್ಲಿ ಕಟ್ಟಡ ಕಟ್ಟುವ ಸಾಮಗ್ರಿ, ಒಳಾಂಗಣ ಅಲಂಕಾರದ ವಸ್ತುಗಳ ಪ್ರದರ್ಶನ ಹಾಗೂ ಅವಶ್ಯ ಮಾಹಿತಿ ನೀಡುವ 'ಬಿಲ್ಡ್ ಎಕ್ಸ್‌ಪೋ' ಆಯೋಜಿಸಲಾಗಿದೆ. ಸಾರ್ವಜನಿಕರು ತಮ್ಮ ಕನಸಿನ ಮನೆ ಕಟ್ಟಲು ಉಪಯೋಗ ಮಾಡಿಕೊಳ್ಳುವಂತೆ ವೀರೇಶ ಮಕರಿ ಮನವಿ ಮಾಡಿದ್ದಾರೆ

ಇಂದು ಬೆಳಿಗ್ಗೆ ಶಾಸಕ ಪ್ರಕಾಶ ಕೋಳಿವಾಡ ಪ್ರದರ್ಶನ ಉದ್ಘಾಟಿಸಲಿದ್ದು, ಪೌರಾಯುಕ್ತ ಪಕ್ಕೀರಪ್ಪ ಇಂಗಳಗಿ, ನಗರ ಯೋಜನಾ ಪ್ರಾಧಿಕಾರದ ಕಾರ್ಯದರ್ಶಿ ಬಿ.ಆರ್. ರವಿಕಿರಣ ಭಾಗವಹಿಸಲಿದ್ದಾರೆ. ಸಂಘದ ಅಧ್ಯಕ್ಷ ವೀರೇಶ ಮಕರಿ ಅಧ್ಯಕ್ಷತೆ ವಹಿಸುವರು.

# ಚನ್ನಪಟ್ಟಣದಿಂದ ನಿಖಿಲ್: ಇಂದು ನಾಮಪತ್ರ



ಬೆಂಗಳೂರು, ಅ. 24 - ಮಿತ್ರ ಪಕ್ಷ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದಾರೆ.

ನಿಖಿಲ್ ಕುಮಾರಸ್ವಾಮಿ ಬಿಜೆಪಿ ಮುಖಂಡರ ಜೊತೆಗೂಡಿ ನಾಳೆ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಲಿದ್ದಾರೆ.

ಕಳೆದ ಮೂರು ದಿನಗಳಿಂದ ಎನ್‌ಡಿಎ ಅಭ್ಯರ್ಥಿ ಆಯ್ಕೆಗೆ ನಡೆದ ಕಸರತ್ತಿನ ವೇಳೆ, ತಾವು ಸ್ಪರ್ಧಿಸುವುದಿಲ್ಲ ಎಂದಿದ್ದ ನಿಖಿಲ್ ಕಣಕ್ಕಿಳಿಯುವ ಪರಿಸ್ಥಿತಿ ನಿರ್ಮಾಣವಾಯಿತು.

ಬಿಜೆಪಿ ಹಿರಿಯ ಮುಖಂಡ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ನಿಖಿಲ್ ಅವರನ್ನೇ ಕಣಕ್ಕಿಳಿಸಬೇಕೆಂದು ಹಿಡಿದ ಪಟ್ಟಿಗೆ ದೇವೇಗೌಡ ಹಾಗೂ ಕುಮಾರಸ್ವಾಮಿ ಅವರುಗಳು ಮಣಿದಿದ್ದಾರೆ.

ಯಡಿಯೂರಪ್ಪ ಮನೆಯಲ್ಲಿ ಇಂದು ಮಧ್ಯಾಹ್ನ ಎನ್‌ಡಿಎ ಮುಖಂಡರು ಸಭೆ ನಡೆಸಿದ ನಂತರ ನಿಖಿಲ್ ಕುಮಾರಸ್ವಾಮಿ ಮೈತ್ರಿ ಅಭ್ಯರ್ಥಿ ಎಂದು ಘೋಷಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ದೋಸ್ತಿ ಅಭ್ಯರ್ಥಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಪಕ್ಷದ ಆಶೀರ್ವಾದವಿದೆ. ನಾವೆಲ್ಲಾ ಮುಖಂಡರು ಒಗ್ಗಟ್ಟಾಗಿ ಉಪಚುನಾವಣೆಯಲ್ಲಿ ಹೋರಾಟ ಮಾಡಿ ಎನ್‌ಡಿಎ ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ ಎಂದರು.

ಸಿ.ಪಿ.ಯೋಗೇಶ್ವರ್ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅದರ ಕುರಿತು ಈಗ ಪ್ರಸ್ತಾಪ ಅಪ್ರಸ್ತುತ. ಫಲಿತಾಂಶದ ನಂತರ ನಾನೇ ಮಾತನಾಡುತ್ತೇನೆ ಎಂದರು.

ಇದಕ್ಕೂ ಮುನ್ನ ನಡೆದ ಬೆಳವಣಿಗೆಯಲ್ಲಿ, ಚುನಾವಣಾ ಹೊಸ್ತಿಲಲ್ಲಿ ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿ ಅಭ್ಯರ್ಥಿಯಾಗಿರುವ ಸಿ.ಪಿ. ಯೋಗೇಶ್ವರ್ ಅವರನ್ನು ಸೋಲಿಸಲು ಜೆಡಿಎಸ್‌ನ ಸಾಮಾನ್ಯ ಕಾರ್ಯಕರ್ತರಿಂದ ಸಾಧ್ಯವಿಲ್ಲ. ನಿಖಿಲ್ ಅವರನ್ನೇ ಕಣಕ್ಕಿಳಿಸುವಂತೆ ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪಟ್ಟುಹಿಡಿದರು.

ಇದೇ ವೇಳೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜೆ.ಪಿ.ನಡ್ಡಾ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ದೇವೇಗೌಡ ಹಾಗೂ ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿ, ತಮ್ಮ ಕುಟುಂಬದವರನ್ನೇ ಕಣಕ್ಕಿಳಿಸಿ ಎಂದು ಸಲಹೆ ಮಾಡಿದರು.

ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದ ಕುಮಾರಸ್ವಾಮಿ ನಿನ್ನೆ ತಡರಾತ್ರಿವರೆಗೂ ಪಕ್ಷದ ಮುಖಂಡರೊಂದಿಗೆ ಸಭೆ ನಡೆಸಿ ಇಂದು ಬೆಳಿಗ್ಗೆ ಪಕ್ಷದ ಕಚೇರಿಯಲ್ಲಿ ಚನ್ನಪಟ್ಟಣ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸುದೀರ್ಘ ಸಮಾಲೋಚನೆ ನೀಡಿದರು.

ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲೇ ಕಾರ್ಯಕರ್ತರು, ನಿಖಿಲ್ ಅವರನ್ನೇ ಕಣಕ್ಕಿಳಿಸುವಂತೆ ಒತ್ತಾಯ ಮಾಡಿದ್ದಲ್ಲದೆ, ಮುಖಂಡರುಗಳು ಬೇರೆ ಹೆಸರನ್ನು ಪ್ರಸ್ತಾಪಿಸಲೂ ಅವಕಾಶ ನೀಡಲಿಲ್ಲ.

ಕಾರ್ಯಕರ್ತರ ಸಭೆ ನಂತರ ಪುತ್ರ ನಿಖಿಲ್ ಜೊತೆಗೂಡಿ ಯಡಿಯೂರಪ್ಪ ಮನೆಗೆ ತೆರಳಿ, ಅಲ್ಲಿ ಬಿಜೆಪಿ ಮುಖಂಡರೊಂದಿಗೆ ಚರ್ಚೆ ನಡೆಸಿದರು.

ತದನಂತರ ಯಡಿಯೂರಪ್ಪ ಅವರೇ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ, ಅವರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆಂದು ಘೋಷಿಸಿದರು. ಕುಮಾರಸ್ವಾಮಿಗಿಂತ ಯಡಿಯೂರಪ್ಪ ಕುಟುಂಬ ಚನ್ನಪಟ್ಟಣ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ.

ಯೋಗೇಶ್ವರ್ ಪಕ್ಷ ಬಿಡುವುದಕ್ಕೂ ಮುನ್ನ ಬಿಜೆಪಿ ನಾಯಕರಲ್ಲೇ ಗೊಂದಲ ಉಂಟು ಮಾಡಿ ಕಾಂಗ್ರೆಸ್‌ಗೆ ಅನುಕೂಲವಾಗುವ ಪರಿಸ್ಥಿತಿ ನಿರ್ಮಿಸಿದ್ದರು. ತಾವು ಅಧಿಕಾರದಿಂದ ಕೆಳಗಿಳಿಯಲು ತೆರೆಮರೆಯಲ್ಲಿ ಯೋಗೇಶ್ವರ್ ಮಾಡಿದ್ದ ಯತ್ನವನ್ನು ಯಡಿಯೂರಪ್ಪ ಇಂದೂ ಮರೆತಿಲ್ಲ.

## ಮೊಮ್ಮಗನ ಗೆಲುವಿಗೆ ದೇವೇಗೌಡ ವಾಸ್ತವ್ಯ

ಬೆಂಗಳೂರು, ಅ. 24 - ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಗೆಲುವಿಗಾಗಿ ಚುನಾವಣೆ ಮುಗಿಯುವವರೆಗೂ ಚನ್ನಪಟ್ಟಣದಲ್ಲಿ ವಾಸ್ತವ್ಯ ಹೂಡುವುದಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಇಂದಿಲ್ಲಿ ಘೋಷಿಸಿದ್ದಾರೆ.

ಉಪಚುನಾವಣಾ ಅಭ್ಯರ್ಥಿ ಆಯ್ಕೆ ಕುರಿತಂತೆ ಪಕ್ಷದ ಕಚೇರಿಯಲ್ಲಿ ಚನ್ನಪಟ್ಟಣ ಕ್ಷೇತ್ರದ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಚರ್ಚೆ ನಡೆಸಿ, ನಿಖಿಲ್ ಅಭ್ಯರ್ಥಿ ಎಂದು ತೀರ್ಮಾನ ಕೈಗೊಂಡ ನಂತರ ಪಕ್ಷದ ಅಭ್ಯರ್ಥಿ ಗೆಲುವಿಗಾಗಿ ಕ್ಷೇತ್ರದಲ್ಲಿಯೇ ಬಿಡಾರ ಹೂಡುವುದಾಗಿ ತಿಳಿಸಿದರು. ಪ್ರಚಾರಕ್ಕಷ್ಟೇ ಒಂದೆರಡು ದಿನ ಹೋಗುವುದಲ್ಲ, ಉಪಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ, ನಮ್ಮ ಅಭ್ಯರ್ಥಿ ಗೆಲುವಿಗಾಗಿ ಪ್ರತಿ ಮತದಾರರನ್ನು ಮುಟ್ಟುತ್ತೇನೆ. ಕಾರ್ಯಕರ್ತರು ಮತ್ತು ಮತದಾರರು ಸದಾಕಾಲ ನಮ್ಮ ಪಕ್ಷದ ಕೈಹಿಡಿದಿದ್ದಾರೆ, ಈ ಬಾರಿಯೂ ಅವರು ನಮ್ಮನ್ನು ಕೈಬಿಡುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

# ಎಲ್ಲೆಂದರಲ್ಲಿ ಕಸ ಹಾಕಿದರೆ ದಂಡ ಗ್ಯಾರಂಟಿ

**(1ನೇ ಪುಟದಿಂದ)** ವನ್ನಾಗಿ ಆಚರಿಸಲಾಗುವುದು. ಪ್ರತಿ ವಾರ್ಡಿನಲ್ಲೂ ಸ್ವಚ್ಛತಾ ಕಾರ್ಯಗಳನ್ನು ನಡೆಸಲಾಗುವುದು. ಇದಕ್ಕಾಗಿ ಅಗತ್ಯ ಸಲಕರಣೆ, ವಾಹನಗಳು, ಮಾನವ ಸಂಪನ್ಮೂಲಗಳನ್ನು ಹೆಚ್ಚುವರಿಯಾಗಿ ಬಳಕೆ ಮಾಡಿಕೊಳ್ಳಲಾಗುವುದು ಎಂದರು.

ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ಹಾಕುವಂತೆ ಮನೆ ಬಾಗಿಲಿಗೆ ಬಂದ ವಾಹನಗಳಲ್ಲಿ ಹಾಕುವಂತೆ ಪ್ರಚಾರ ಮಾಡುತ್ತಾ ಬಂದಿದ್ದರೂ, ಕೆಲವರು ರಾತ್ರಿ ವೇಳೆ ಎಲ್ಲೆಂದರಲ್ಲಿ ಕಸ ಹಾಕುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಇದನ್ನು ತಪ್ಪಿಸಲು ಆರೋಗ್ಯ ನಿರೀಕ್ಷಕರು ಮನೆಬಾಗಿಲಿಗೆ ಬಂದು ದಂಡ ವಿಧಿಸಿ, ಕಸ ಹಾಕಿದವರ ಫೋಟೋಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದಾಗಿ ಎಚ್ಚರಿಕೆ ನೀಡಿದರು.

ಪಾಲಿಕೆ ವ್ಯಾಪ್ತಿಯ ಎಲ್ಲಾ ಆಸ್ತಿ ಮಾಲೀಕರು ಆಸ್ತಿ ತೆರಿಗೆ, ನೀರಿನ ತೆರಿಗೆ, ಯುಜಿಡಿ ಶುಲ್ಕ, ಉದ್ದಿಮೆ ಪರವಾನಿಗೆ ಶುಲ್ಕವನ್ನು ಪಾಲಿಕೆಗೆ ಪಾವತಿಸುವುದು ಕಡ್ಡಾಯವಾಗಿದ್ದು, ಒಂದು ವೇಳೆ ಪಾವತಿಸದೇ ಇದ್ದಲ್ಲಿ ಪಾಲಿಕೆಯ ಅಧಿಕಾರಿಗಳೇ ಭೇಟಿ ನೀಡಿ ಸ್ಥಳದಲ್ಲಿಯೇ ದಂಡದೊಂದಿಗೆ ತೆರಿಗೆ, ಶುಲ್ಕ ವಸೂಲಿಗೆ ಬಿಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

## ಜಲಸಿರಿ ಬಿಲ್ ಪಾವತಿಸುವುದು ಕಡ್ಡಾಯ

**(1ನೇ ಪುಟದಿಂದ) ಅವರು ಕೋರಿದರು. 28 ರಿಂದ ಹೆಲ್ಪ್ ಡೆಸ್ಕ್ ಆರಂಭ: ಮಹಾನಗರ ಪಾಲಿಕೆಯ ಪ್ರಧಾನ ಕಚೇರಿಯಲ್ಲಿ ಇದೇ ದಿನಾಂಕ 28 ಸೋಮವಾರದಿಂದ ಸಾರ್ವಜನಿಕರ ಹಿತದೃಷ್ಟಿಯಿಂದ 'ಹೆಲ್ಪ್‌ಡೆಸ್ಕ್' ಮಾಹಿತಿ ಕೇಂದ್ರವನ್ನು ಆರಂಭಿಸುವುದಾಗಿ ಮೇಯರ್ ಹಾಗೂ ಆಯುಕ್ತರು ತಿಳಿಸಿದರು.**

**ಸಾರ್ವಜನಿಕರಲ್ಲಿ ಏನಾದರೂ ಕುಂದು ಕೊರತೆಗಳಿದ್ದಲ್ಲಿ ಅಥವಾ ಪಾಲಿಕೆಯಿಂದ ನೀಡಲಾಗುವ ಸೇವೆಗಳಲ್ಲಿ ಏನಾದರೂ ವ್ಯತ್ಯಯ ಉಂಟಾದಲ್ಲಿ 'ಹೆಲ್ಪ್ ಡೆಸ್ಕ್' ಸಂಪರ್ಕಿಸುವಂತೆ ಮನವಿ ಮಾಡಿದರು.**

## ಮಳೆಯಿಂದ ಹಾನಿಗೊಳಗಾದ ಉಂಟಾದ ಮನೆಗಳಿಗೆ ಪರಿಹಾರ

ಮಳೆಯಿಂದ ಅನೇಕ ಮನೆಗಳು ಬಿದ್ದಿದ್ದು, ಅಂತಹ ಮನೆಗಳ ವಾರಸುದಾರರಿಗೆ ಪರಿಹಾರ ನೀಡಲಾಗಿದೆ ಎಂದು ಆಯುಕ್ತರಾದ ರೇಣುಕ ಮಾಹಿತಿ ನೀಡಿದರು.

ಕೆಲವು ತಗ್ಗು ಪ್ರದೇಶಗಳ ನೀರು ನುಗ್ಗಿದ್ದು, 165 ಕಿಮೀ ರಾಜಕಾಲುವೆ ಇದ್ದು. ಈಗಾಗಲೇ ಆವರಗೆರೆಯಿಂದ ಬಸಾಪುರದ ವರೆಗಿನ ರಾಜಕಾಲುವೆಯನ್ನು ಕ್ಲೀನ್ ಮಾಡಿಸಲಾಗಿದೆ ಎಂದರು.

**ಬೀದಿ ನಾಯಿಗಳ ಕಾಟ : ಸಾರ್ವಜನಿಕರಿಂದ ದೂರು:** ನಗರದಲ್ಲಿ ಬಹುತೇಕ ಕಡೆಗಳಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, ಸಾರ್ವಜನಿಕರ ದೂರಿನ ಅನ್ವಯ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

ಈಗಾಗಲೇ 7500 ನಾಯಿಗಳಿಗೆ ಎಬಿಸಿ ಚಿಕಿತ್ಸೆ ಕೊಡಿಸಲಾಗಿದೆ. ನಗರದಲ್ಲಿ ಹಂದಿಗಳ ಹಾವಳಿ ಕೂಡ ಹೆಚ್ಚಾಗುತ್ತಿದೆ ಎಂದು ದೂರುಗಳೂ ಸಹ ಬರುತ್ತಿದ್ದು, ಹಂದಿ ಸಾಕಾಣಿಕೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಮಾತನಾಡಿ ನಿಯಂತ್ರಣಕ್ಕೆ ಕ್ರಮ ಜರುಗಿಸಲಾಗುವುದು ಎಂದರು.

**ದಾಖಲೆಗಳನ್ನು ತಿದ್ದಲು ಬಾರದಂತೆ ಲ್ಯಾಮಿನೇಷನ್:** 1984 ರಿಂದ 2000 ಸಾಲಿನವರೆಗಿನ ಎಲ್ಲಾ ದಾಖಲಾತಿಗಳ ವಹಿಗಳನ್ನು ಲ್ಯಾಮಿನೇಷನ್ ಮಾಡುವ ಮೂಲಕ ತಿದ್ದಲು ಬಾರದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತರು ಮತ್ತು ಮೇಯರ್ ಹೇಳಿದರು.

ಎಲ್ಲಾ ಹಳೆಯ ದಾಖಲೆಗಳನ್ನು ಸುರಕ್ಷಿತವಾಗಿ ಇಡಲಾಗಿದೆ. ಇದರಿಂದ ಯಾರೂ ಕೂಡ ದಾಖಲೆಗಳನ್ನು ತಿದ್ದಲು ಸಾಧ್ಯವಿಲ್ಲ. ಎಲ್ಲಾ ರೆಕಾರ್ಡ್‌ಗಳನ್ನು ಮೂಲ ಕಡತದಲ್ಲಿ ಫೈಲ್ ಮಾಡಲಾಗಿದ್ದು, ರ್‍ಯಾಕ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಆಫ್ಘಾನ್‌ನಲ್ಲಿ ಸಜೀವಿಗಳ ಚಿತ್ರ, ವಿಡಿಯೋ ಪ್ರಸಾರ ನಿಷೇಧ

ಇಸ್ಲಾಮಾಬಾದ್, ಅ. 24 - ಮಾಧ್ಯಮಗಳು ಯಾವುದೇ ಸಜೀವಿಗಳ ಚಿತ್ರಗಳನ್ನು ಪ್ರದರ್ಶಿಸಬಾರದು ಎಂದು ಆಫ್ಘಾನಿಸ್ತಾನದ ಪ್ರಾಂತ್ಯವೊಂದು ನಿಷೇಧ ಹೇರಿದೆ. ತಾಲಿಬಾನ್ ನೈತಿಕ ಕಾನೂನುಗಳ ಅನ್ವಯ ನಿರ್ಬಂಧ ಹೇರಲಾಗಿದೆ.

ಆಫ್ಘಾನಿಸ್ತಾನದ ಹೆಲ್ಮಂಡ್ ಪ್ರಾಂತ್ಯದಲ್ಲಿ ಈ ನಿಷೇಧ ಹೇರಲಾಗಿದೆ. ಪ್ರಾಣಿಗಳು ಹಾಗೂ ಮನುಷ್ಯರ ಚಿತ್ರಗಳ ಪ್ರಕಟಣೆ ಹಾಗೂ ಪ್ರಸಾರದ ಮೇಲೆ ಸಂಪೂರ್ಣ ನಿಷೇಧ ಹೇರಲಾಗಿದೆ.

ಕಳೆದ ಆಗಸ್ಟ್ ತಿಂಗಳಲ್ಲಿ ಆಫ್ಘಾನ್ ಸರ್ಕಾರ ಷರಿಯಾದ 17ನೇ ವಿಧಿಯ ಅನ್ವಯ ಸಜೀವಿಗಳ ಚಿತ್ರಗಳ ಪ್ರಕಟಣೆ ಮೇಲೆ ನಿಷೇಧ ಹೇರಿತ್ತು. ಅಲ್ಲದೇ, ಸಾರ್ವಜನಿಕ ಸಾರಿಗೆ, ಮುಖಕ್ಷೌರ, ಮಾಧ್ಯಮ ಹಾಗೂ ಸಂಭ್ರಮಿಸುವುದೂ ಸೇರಿದಂತೆ ನಿತ್ಯ ಜೀವನದ ಹಲವಾರು ವಿಷಯಗಳ ಮೇಲೆ ನಿರ್ಬಂಧ ಹೇರಲಾಗಿತ್ತು.

ತಕ್ಷಣದಿಂದ ಜಾರಿಗೆ ಬರುವಂತೆ ಸಜೀವಿಗಳ ಚಿತ್ರೀಕರಣ ಹಾಗೂ ಪ್ರಕಟಣೆ ಮೇಲೆ ನಿಷೇಧ ಹೇರಬೇಕು. ಇದರಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ ಎಂದು ಹೆಲ್ಮಂಡ್ ಅಧಿಕಾರಿಗಳು ಹೇಳಿದ್ದಾರೆ.

ಕಳೆದ ವಾರ ತಾಲಿಬಾನ್ ನಿರ್ವಹಿಸುವ ಸರ್ಕಾರಿ ಮಾಧ್ಯಮಗಳು ತಖಿರ್, ಮೈದಾನ್ ವಾರ್ದಕ್ ಹಾಗೂ ಕಂದಹಾರ್ ಸೇರಿದಂತೆ ಹಲವು ಪ್ರಾಂತ್ಯಗಳಲ್ಲಿ ಸಜೀವಿಗಳ ಚಿತ್ರ ಪ್ರದರ್ಶನ ನಿಲ್ಲಿಸಿದ್ದವು. ಕೆಲ ಖಾಸಗಿ ವಾಹಿನಿಗಳು ಸಹ ಇದೇ ರೀತಿಯ ಕ್ರಮ ತೆಗೆದುಕೊಂಡಿವೆ.

ಇರಾನ್ ಹಾಗೂ ಸೌದಿ ಅರೇಬಿಯಾ ಸೇರಿದಂತೆ ಯಾವುದೇ ಮುಸ್ಲಿಂ ಬಹುಸಂಖ್ಯಾತ ದೇಶ ಈ ರೀತಿಯ ನಿರ್ಬಂಧ ಹೊಂದಿಲ್ಲ. ಈ ಹಿಂದೆ 1990ರಲ್ಲಿ ತಾಲಿಬಾನ್ ಆಡಳಿತ ನಡೆಸಿದ ಸಂದರ್ಭದಲ್ಲಿ ದೂರದರ್ಶನ, ರೇಡಿಯೋ ಹಾಗೂ ಪತ್ರಿಕೆಗಳ ಮೇಲೆ ಸಂಪೂರ್ಣ ನಿಷೇಧ ಹೇರಿತ್ತು.

ಇದೇ ವೇಳೆ ಮಾಹಿತಿ ಸಚಿವಾಲಯವು 400 ಪುಸ್ತಕಗಳ ಮೇಲೆ ನಿಷೇಧ ಸೇರಿದೆ. ನಿಷೇಧಿತ ಪುಸ್ತಕಗಳನ್ನು ಅಂಗಡಿಗಳು ಹಾಗೂ ಪ್ರಕಾಶನ ಸಂಸ್ಥೆಗಳಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಇವುಗಳ ಜಾಗದಲ್ಲಿ ಇಸ್ಲಾಮಿಕ್ ಪುಸ್ತಕಗಳನ್ನು ಮಾರಬೇಕೆಂದು ತಿಳಿಸಲಾಗಿದೆ.

# ಆವಿಷ್ಕಾರಕ್ಕೆ ಹೆಚ್ಚಿನ ಅದ್ಯತೆ ನೀಡಿ

**(1ನೇ ಪುಟದಿಂದ)** ಫ್ಯಾನ್ ಒಂದನ್ನು ರೂಪಿಸುವಲ್ಲಿ ಇಂಜಿನಿಯ ರಿಂಗ್ ವಲಯದ ನಾಲ್ಕು ವಿಭಾಗಗಳು ಭಾಗಿಯಾಗಿ ರುತ್ತವೆ. ಹೀಗಾಗಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಸಮಯದ ಶೇ.10 ರಷ್ಟನ್ನಾದರೂ ಬಹುಶಿಸ್ತೀಯ ಅಧ್ಯಯನಕ್ಕೆ ಮೀಸಲಿಡಬೇಕು. ಅನ್ವೇಷಣೆಗೆ ಅಗತ್ಯವಾದ ಕೌಶಲ್ಯ ಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮಣಿಪಾಲದ ಡಿ.ಒ.ಟಿ. ನೆಟ್ ಸಂಶೋಧನೆ ಹಾಗೂ ತರಬೇತಿ ವಿಭಾಗದ ನಿರ್ದೇಶಕ ಡಾ. ಯು.ಸಿ. ನಿರಂಜನ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಇಂಜಿನಿಯರಿಂಗ್ ವಿಭಾಗಗಳನ್ನು ಜೊತೆ ಸೇರಿಸುವುದು ಹೆಚ್ಚಾಗುತ್ತಿದೆ. ಇದಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳೂ ಬದಲಾಗಬೇಕು ಎಂದು ಕಿವಿಮಾತು ಹೇಳಿದರು.

ಬೆಂಗಳೂರಿನ ಕಸ್ಟಮ್ ಫಿಟ್ ಎ.ಐ. ಸಹಸ್ಥಾಪಕ ಹಾಗೂ ಸಿಇಒ ಬಿ.ವಿ. ಅಶ್ವಿನ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಉದ್ಯೋಗ ಪಡೆಯಲು ಅಗತ್ಯ ಕೌಶಲ್ಯ ಬೆಳೆಸಿಕೊಳ್ಳುವ ಜೊತೆಗೆ ಉದ್ಯೋಗ ಸೃಷ್ಟಿಯುವ ಉದ್ಯಮಿಗಳೂ ಆಗಬೇಕಿದೆ. ನವೋದ್ಯಮಗಳನ್ನು ಸ್ಥಾಪಿಸಲು ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದರು.

ವೇದಿಕೆಯ ಮೇಲೆ ಮಲೇಷಿಯಾದ ಟೆಕ್ನೊಲೊಜಿ ವಿಶ್ವವಿದ್ಯಾಲಯದ ಎಲೆಕ್ಟ್ರಿಕಲ್ ಪವರ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಉಪನ್ಯಾಸಕ ಡಾ. ಚೀ ವಿ ತಾನ್, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಬಿಐಇಟಿಯ ಡಾ. ಬಿ. ಪೂರ್ಣಿಮ, ಡಾ. ಹೆಚ್.ಪಿ. ವಿನುತ ಮತ್ತಿತರರು ಉಪಸ್ಥಿತರಿದ್ದರು.

# ಹದಡಿಯಲ್ಲಿ ನಾಳೆ ಹೃದಯ ಆರೋಗ್ಯ ತಪಾಸಣೆ

ದಾವಣಗೆರೆ, ಅ.24- ಉಚಿತ ಹೃದಯ ಆರೋಗ್ಯ ತಪಾಸಣೆ ಶಿಬಿರ, ಭತ್ತ ಬೆಳೆಯ ಕ್ಷೇತ್ರೋತ್ಸವ ಮತ್ತು ರೈತರಿಗೆ ಗೊಬ್ಬರ ಹಾಗೂ ಪ್ರಥಮ ಚಿಕಿತ್ಸೆ ಬಾಕ್ಸ್ ವಿತರಣೆ ಕಾರ್ಯಕ್ರಮವು ಹದಡಿ ಗ್ರಾಮದ ಕನಕ ವಿವಿಧೋದ್ದೇಶಗಳ ಸಹಕಾರಿ ಸಂಘ ಬ್ಯಾಂಕ್ ಆವರಣದಲ್ಲಿ ನಾಡಿದ್ದು ದಿನಾಂಕ 26ರ ಶನಿವಾರ ಬೆಳಗ್ಗೆ 10.30ಕ್ಕೆ ನಡೆಯಲಿದೆ.

ದಾವಣಗೆರೆ ಲಯನ್ಸ್ ಕ್ಲಬ್ ಹಾಗೂ ಹದಡಿಯ ಕನಕ ವಿವಿಧೋದ್ದೇಶಗಳ ಸಹಕಾರಿ ಸಂಘ ಮತ್ತು ಎಸ್.ಎಸ್. ನಾರಾಯಣ ಹೆಲ್ತ್ ಸೆಂಟರ್ (ದಾವಣಗೆರೆ) ಇವರುಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ ವಹಿಸುವರು. ಉದ್ಘಾಟನೆಯನ್ನು ಕನಕ ವಿವಿದೋದ್ದೇಶಗಳ ಸಂಘದ ಅಧ್ಯಕ್ಷ ಎ.ಹೆಚ್. ನಾಗರಾಜ್ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಇಂದ್ರಮ್ಮ ಎಂ.ಎನ್. ದಳವಾಯಿ, ಎಸ್‌ಐ ಶ್ರೀ ಶೈಲ ಪಟ್ಟಣಶೆಟ್ಟಿ, ಆರ್.ಜಿ. ಶ್ರೀನಿವಾಸಮೂರ್ತಿ, ಬೆಳ್ಳೂಡಿ ಶಿವಕುಮಾರ್, ಎಂ.ಎಸ್. ಉದಯ್‌ಕುಮಾರ್, ಹೆಚ್.ಸಿ. ಹನುಮಂತಪ್ಪ ಇವರುಗಳು ಆಗಮಿಸುವರು.

# ಮಹಾರಾಷ್ಟ್ರದಲ್ಲಿ ವಂಶಾಡಳಿತ ಸರ್ವವ್ಯಾಪಿ

**(1ನೇ ಪುಟದಿಂದ)** ಪಿ.) ಇನ್ನೂ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿಲ್ಲ. ಆದರೆ, ದಿವಂಗತ ಮಾಜಿ ಕೇಂದ್ರ ಸಚಿವ ಆರ್.ಆರ್ ಪಾಟೀಲ್ ಅವರ ಪುತ್ರ ರೋಹಿತ್ ಪಾಟೀಲ್ ಅವರು ಎನ್.ಸಿ.ಪಿ. (ಎಸ್.ಪಿ.) ಅಭ್ಯರ್ಥಿಯಾಗಿ ಟಸ್ಗಾಂವ್ - ಕವತೆ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದಾರೆ.

ಶರದ್ ಪವಾರ್ ಅವರ ಮೊಮ್ಮಗ ರೋಹಿತ್ ಪವಾರ್ ಅವರು ಅಹಲ್ಯಾನಗರದಿಂದ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ.

ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಅಧ್ಯಕ್ಷ ರಾಜ್ ಠಾಕ್ರೆ ಅವರ ಪುತ್ರ ಅಮಿತ್ ಅವರು ಮುಂಬೈನ ಮಾಹಿಮ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಈಗಾಗಲೇ ಅಧಿಕಾರದಲ್ಲಿರುವವರು ತಮ್ಮ ಕ್ಷೇತ್ರದ ಮೇಲಿನ ಬಿಗಿ ಹಿಡಿತ ಮುಂದುವರೆಸಲು ಬಯಸುತ್ತಾರೆ. ಅವರು ಈಗಾಗಲೇ ಕ್ಷೇತ್ರದಲ್ಲಿ ಬೇರು ಬಿಟ್ಟಿರುತ್ತಾರೆ ಹಾಗೂ ಮತದಾರರ ಸಂಪರ್ಕ ಹೊಂದಿರುತ್ತಾರೆ. ಇದರಿಂದಾಗಿ ಅವರ ಕುಟುಂಬದವರನ್ನು ಕಣಕ್ಕಿಳಿಸುವುದು ಸುರಕ್ಷಿತ ಎಂದು ರಾಜಕೀಯ ಪಕ್ಷಗಳು ಭಾವಿಸುತ್ತವೆ. ಕೆಲವೊಮ್ಮೆ ಅನುಕಂಪದ ಮತಗಳಿಗಾಗಿಯೂ ಕುಟುಂಬದವರಿಗೆ ಟಿಕೆಟ್ ನೀಡಲಾಗುತ್ತದೆ ಎಂದು ರಾಜಕೀಯ ವಿಶ್ಲೇಷಕ ಅಭಯ್ ದೇಶಪಾಂಡೆ ಹೇಳಿದ್ದಾರೆ.

# ಜಗಳೂರು : ಕನ್ನಡ ಜ್ಯೋತಿ ರಥೋತ್ಸವಕ್ಕೆ ಸ್ವಾಗತ



ಜಗಳೂರು, ಅ. 24- ಮಂಡ್ಯದಲ್ಲಿ ಡಿ.20 ರಿಂದ ಮೂರು ದಿನಗಳ ಕಾಲ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಜ್ಯೋತಿ ಸ್ತಬ್ಧಚಿತ್ರ ರಥಯಾತ್ರೆಯನ್ನು ಸ್ವಾಗತಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಮಹಾತ್ಮಗಾಂಧಿ ವೃತ್ತದ ಮೂಲಕ ಅಂಬೇಡ್ಕರ್ ವೃತ್ತದವರೆಗೆ ಮೆರವಣಿಗೆ ಮೂಲಕ ಸಾಗಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿ ನಂತರ ಬೀಳ್ಕೊಡಲಾಯಿತು.

ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಮಾತನಾಡಿ, 'ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಶ್ರೀಮಂತವಾಗಿದ್ದು, ರಾಜ್ಯವ್ಯಾಪಿ ಜನಜಾಗೃತಿ ಮೂಲಕ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೊಳಿಸಬೇಕಿದೆ. ಕನ್ನಡ ರಥಯಾ ತ್ರೆಯು ನಮ್ಮ ನಾಡು, ನುಡಿ, ಸಂಸ್ಕೃತಿಯ ಪ್ರತೀಕವಾಗಿದೆ. ವಿವಿಧ ಜಿಲ್ಲೆಗಳಲ್ಲಿ ರಥ ಸಂಚರಿಸಲಿದೆ ಎಂದು ತಿಳಿಸಿದರು.

**ರಥಯಾತ್ರೆಗೆ ತಾತ್ಸಾರ ; ಅಧಿಕಾರಿಗಳು ಗೈರು :** ಕನ್ನಡ ಜ್ಯೋತಿ ರಥಕ್ಕೆ ಸ್ವಾಗತಿಸಲು ಎರಡು ಮೂರು ಇಲಾಖೆಯವರು, ಶಾಲಾ ಶಿಕ್ಷಕರು ಮಾತ್ರ ಭಾಗವಹಿಸಿದ್ದರು. ಕನ್ನಡ ಅಭಿಮಾನದ ಕೊರತೆ ಎದ್ದು ಕಾಣುತ್ತಿತ್ತು. ಅಲ್ಲದೆ ತಹಶೀಲ್ದಾರ್ ಕಛೇರಿ ಮುಂಭಾಗದ ಕುವೆಂಪು ಪುತ್ಥಳಿಗೆ ಮಾಲಾರ್ಪಣೆ ಮಾಡದ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಧಿಕಾರಿಗಳ ತಾತ್ಸಾರಕ್ಕೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಯಿತು.

ತಾ.ಪಂ.ಇಓ ಕೆಂಚಪ್ಪ, ಪಿಐ ಶ್ರೀನಿವಾಸ್ ರಾವ್, ಪ.ಪಂ.ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಜಿ.ಪಂ ಎಇಇ ಶಿವಮೂರ್ತಿ, ಬಿಇಓ ಹಾಲಮೂರ್ತಿ, ಬಿಆರ್‌ಸಿ ಡಿಡಿ ಹಾಲಪ್ಪ, ಕಸಾಪ ಅಧ್ಯಕ್ಷೆ ಸುಜಾತಮ್ಮ, ಕಾರ್ಯದರ್ಶಿ ಗೀತಾಮಂಜು, ಮಾರಪ್ಪ, ಸಾಹಿತಿ ಎನ್.ಟಿ.ಎರ್ರಿಸ್ವಾಮಿ, ಎಂ.ರಾಜಪ್ಪ, ಓಬಣ್ಣ, ನಾಗಲಿಂಗಪ್ಪ, ವಕೀಲ ಓಬಳೇಶ್ ಸೇರಿದಂತೆ ಇತರರು ಈ ಸಂದರ್ಭದಲ್ಲಿದ್ದರು.

# ಅಧ್ಯಯನದಲ್ಲಿ ಕ್ರಿಯಾಶೀಲತೆ ಅಗತ್ಯ



ದಾವಣಗೆರೆ, ಅ.24- ದಾವಣಗೆರೆ ದೃಶ್ಯಕಲಾ ಮಹಾವಿದ್ಯಾಲಯ ದೇಶದಲ್ಲಿಯೇ ಹೆಸರು ಮಾಡಿದೆ. ಇಲ್ಲಿನ ಕಲಾ ವಿದ್ಯಾರ್ಥಿಗಳ ಸಾಧನೆ ಇತರರಿಗೆ ಮಾದರಿಯಾಗಿದೆ ಎಂದು ಬೆಂಗಳೂರಿನ ಆರ್ ಮತ್ತು ಟಿಡಿಸಿ ಸೆರಾಮಿಕ್ ವಿಭಾಗದ ನಿವೃತ್ತ ಉಸ್ತುವಾರಿ ಉಲ್ಲಾಸ್ಕರ್ ಡೇ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದ ವಜ್ರಮಹೋತ್ಸವದ ಹಿನ್ನೆಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಚಿತ್ರೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಕಲಾ ವಿದ್ಯಾರ್ಥಿಗಳು ಸದಾ ಕ್ರಿಯಾಶೀಲತೆ ಮತ್ತು ಉತ್ಸಾಹದಿಂದ ಅಧ್ಯಯನ ಮಾಡಿದರೆ ಇನ್ನಷ್ಟು ಸಾಧನೆ ಮಾಡಲು ಪ್ರೇರಣೆಯಾಗಲಿದೆ ಎಂದು ಹೇಳಿದರು.

ದಾವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶ್ವವಿದ್ಯಾಲಯ 60 ವರ್ಷ ಗಳನ್ನು ಪೂರೈಸಿರುವುದು ಸಂತೋಷದ ವಿಚಾರ. ಕಲೆ, ಸಾಹಿತ್ಯಕ್ಕೆ 19-20 ನೇ ಶತಮಾನದ ರಾಜ, ಮಹಾರಾಜರ ಕಾಲದಲ್ಲಿ ಸಿಗುತ್ತಿದ್ದ ಪ್ರೋತ್ಸಾಹಗಳನ್ನು ಇಂದಿನ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ 21 ನೇ ಶತಮಾನದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮುಂದುವರೆಸಿಕೊಂಡು ಹೋಗುತ್ತಿವೆ ಎಂದರು.

ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಮಹಾವಿದ್ಯಾಲಯ ಮತ್ತು ಗುರುಗಳೊಂದಿಗೆ ಸಂಪರ್ಕದಲ್ಲಿರಬೇಕು ಎಂದು ಸಲಹೆ ನೀಡಿದ ಅವರು, ಹಳೆಯ ವಿದ್ಯಾರ್ಥಿಗಳು ಈ ಕಾಲೇಜಿಗೆ ಸಾಧನೆಯೊಂದಿಗೆ ಭೇಟಿ ನೀಡಿದಾಗ ಕಲಿಸಿದ ಗುರುಗಳಿಗೆ ಆಗುವ ಆನಂದ ದೊಡ್ಡದು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಜೈರಾಜ್ ಪಾಟೀಲ್, ಸಹಾಯಕ ಪ್ರಾಧ್ಯಾಪಕ ಡಾ.ಸತೀಶ್ ಕುಮಾರ್ ವಲ್ಲೇಪುರೆ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಮಧುಶ್ರೀ ಉಪಸ್ಥಿತರಿದ್ದರು.



ಹಳೆ ಊರಲ್ಲಿನ ಹಳೆಯ ಕಾಲದ ದೀಪಾವಳಿ ಸ್ವಾರಸ್ಯಗಳು...

## ನಮ್ಮ ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು ಹಾಗೂ ನೆನಪುಗಳು

# ತಂಬೂರಿ ವೆಂಕಟಪ್ಪನ ನ್ಯಾಯ ?!...

**ಹೆಚ್.ಬಿ.ಮಂಜುನಾಥ್,**
ಹಿರಿಯ ಪತ್ರಕರ್ತ



ದಶಕಗಳ ಹಿಂದೆ ದಾವಣಗೆರೆಯಲ್ಲೊಬ್ಬ ತತ್ವಪದ, ದಾಸರ ಪದಗಳ ಗಾಯಕ ಬಹುಷಃ ಆತನ ಹೆಸರು ವೆಂಕಟಪ್ಪ ಎಂದಿರಬೇಕು, ಎಲ್ಲರೂ ಅವನನ್ನು 'ತಂಬೂರಿ' ಎಂದೇ ಕರೆಯುತ್ತಿದ್ದರು. ಕಾರಣ ಮಾರುದ್ದದ ಗಳಕ್ಕೆ ಒಣಗಿದ ಸಿಹಿಗುಂಬಳ ಬುರುಡೆ ಸಿಕ್ಕಿಸಿ ಅದಕ್ಕೊಂದು ಏಕತಂತಿ ಕಟ್ಟಿ ತೋರು ಬೆರಳಿಂದ ಅದನ್ನು ಮೀಟಿ ಡಿಂವ್ ಡಿಂವ್ ನಾದ ಮಾಡುತ್ತಾ ಎತ್ತಿ ಕಟ್ಟಿದ ಕಚ್ಚೆ ಪಂಚೆ, ಮಾಸಲು ಅಂಗಿ, ತಲೆ ಮೇಲೊಂದು ಪೇಟ ಸುತ್ತಿಕೊಂಡು ಅಂಗಡಿಗಳ ಮುಂದೆ ಹೋಗಿ ಪದ ಹೇಳುತ್ತಾ ಕಾಸು ಕೇಳುವುದು ಆತನ ಕಾಯಕ.

ಅಂದು ದೀಪಾವಳಿ. ಹಳೇ ನಗರದ ಚೌಕಿಪೇಟೆಯ ಶ್ರೀಮಂತರ ಅಂಗಡಿಗಳಲ್ಲೂ ಪೂಜೆ ನಡೆದಿತ್ತು. ವೆಂಕಟಪ್ಪ ಹಾಡುತ್ತಾ ಅಂಗಡಿಗಳ ಮುಂದೆ ಬಂದ. 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲಗೊಂದಿದ್ದರೆ ಸಾಕೋ...' ಹಾಡನ್ನು ಒಂದು ಅಂಗಡಿಯ ಮುಂದೆ ಹಾಡಿದ, 'ಏ ತಂಬೂರಿ, ಅದು ಬ್ಯಾಡ, ಭಾಗ್ಯದ ಲಕ್ಷ್ಮಿ ಬಾರಮ್ಮ ಪದ ಹಾಡು' ಎಂದರು ಆ ದೊಡ್ಡ ಅಂಗಡಿಯವರು. ವೆಂಕಟಪ್ಪ ಹಾಡಲಿಲ್ಲ. ಮುಂದಿನ ಅಂಗಡಿ ಮುಂದೆ 'ಸತ್ಯವಂತರಿಗಿದು ಕಾಲವಲ್ಲ ದುಷ್ಟ ಜನರಿಗೆ ಸುಭೀಕ್ಷಕಾಲ' ಪದವನ್ನು ಆರಂಭಿಸಿದ. ಅವರೂ 'ಭಾಗ್ಯದ ಲಕ್ಷ್ಮಿ ಬಾರಮ್ಮ ಹಾಡೋ ವೆಂಕಟಪ್ಪ' ಎಂದರು. ವೆಂಕಟಪ್ಪ ಹಾಡಲಿಲ್ಲ. ಮತ್ತೊಂದು ಅಂಗಡಿ ಮುಂದೆ 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿ ಬಿಡು ನಾಲಿಗೆ' ಹಾಡು ಹೇಳುತ್ತಿದ್ದಂತೆಯೇ ಅಂಗಡಿಯವರು 'ಲೇ ವೆಂಕಾ ಎಂಥಾ ಹಾಡು ಹಾಡ್ತೀಯ, ಭಾಗ್ಯದ ಲಕ್ಷ್ಮಿ ಬಾರಮ್ಮ ಹಾಡೋ ಮಾರಾಯಾ' ಎಂದರು. ಶ್ರೀಮಂತರ ಮಾತಿಗೆ ಸೊಪ್ಪು ಹಾಕದ ವೆಂಕಟಪ್ಪ, ಚೌಕಿಪೇಟೆ ಹಾಗೂ ಅಡಿವೆಯ್ಯನ ಗಲ್ಲಿ ಮೂಲೆಯ ಮುರಿಗೆಪ್ಪನವರ ಕರಿ ಹಂಚಿನ ಚಿಕ್ಕ ಕಟ್ಟಡದಲ್ಲಿ ಸಣ್ಣ ಕಿರಾಣಿ ಅಂಗಡಿ ಮಾಡಿ ಕೊಂಡಿದ್ದ ದೇವಾಂಗದ ಫಕ್ಕೀರಪ್ಪನ ಅಂಗಡಿ ಮುಂದೆ ಬಂದು 'ಭಾಗ್ಯದ ಲಕ್ಷ್ಮಿ ಬಾರಮ್ಮ..' ಹಾಡನ್ನು ಹಾಡಲಾರಂಭಿಸಿದ. ಆ ಕಡೆ ಅಂಗಡಿಯವರು ಕೋಪದಿಂದ ಬಂದು 'ಏ ತಂಬೂರಿ, ಲಕ್ಷ್ಮಿ ಹಾಡು ಹಾಡಪ್ಪ ಅಂತ ನಾವು ಹೇಳಿದರೂ ಹಾಡದಲೇ ಧಿಮಾಕ್ ಮಾಡಕೊಂಡ್ ಬಂದಿ, ಇಲ್ ಬಂದು ಲಕ್ಷ್ಮಿ ಹಾಡ್ ಹಾಡ್ತೀಯಾ ? ಎಂದು ಏರು ಧ್ವನಿಯಲ್ಲಿ ಗದರಿಸುತ್ತಾ ಕೇಳಿದರು. ಅವರ ಕಡೆ ತಿರುಗಿಯೂ ನೋಡದೆ ತಂಬೂರಿ ವೆಂಕಟಪ್ಪ ಮೆಲು ಧ್ವನಿಯಲ್ಲಿ ಉತ್ತರ ಕೊಟ್ಟ 'ನಿಮ್ಗಳ ತಾವ ಲಕ್ಷ್ಮಿ ಕಾಲ್ ಮುರ್ಕೊಂಡು ಕುಂತಾಳೆ, ಈವಯ್ಯ ಹೊಸದಾಗಿ ಸಣ್ಣ ಅಂಗಡಿ ಮಾಡ್ಯಾನೆ, ಇವನಿಗೆ ಬರಬೇಕು ಲಕ್ಷ್ಮಿ' ಎಂದ. ಆಕ್ಷೇಪಿಸಿದವರು ಮರು ಮಾತನಾಡಲಿಲ್ಲ.

# ಉತ್ತಮ ಮೌಲ್ಯ ಅಳವಡಿಸಿಕೊಂಡಾಗ ಮಾತ್ರ ಜೀವನಕ್ಕೆ ಅರ್ಥ

## ಶರಣ ಸಾಹಿತ್ಯ ಪರಿಷತ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಹೆಚ್.ಕೆ.ಲಿಂಗರಾಜು



ದಾವಣಗೆರೆ, ಅ.24- ಸಮಾಜದಲ್ಲಿ ಬಾಳುವ ಪ್ರತಿಯೊಬ್ಬ ಮನುಷ್ಯನು ತನ್ನ ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಕೊಳ್ಳಬೇಕು. ಇದರಿಂದ ಬದುಕಿಗೆ ಒಂದು ಅರ್ಥ ಬರುತ್ತದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಹೆಚ್.ಕೆ.ಲಿಂಗರಾಜು ಹೇಳಿದರು.

ನಗರದ ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಶರಣೆ ಹೆಚ್.ಎಂ ಮಂದಾಕಿನಿ ಸ್ವಾಮಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.


ಮೌಲ್ಯ ಇಲ್ಲದವನ ಬಾಳು ಹಾಳು. ಮೌಲ್ಯಗಳನ್ನು ಶಿಕ್ಷಣದ ಆರಂಭಿಕ ಹಂತದಿಂದ ಪಠ್ಯಕ್ರಮದಲ್ಲಿ ಅಳವಡಿಸಿ, ಕಲಿಸುವುದರಿಂದ ಮಕ್ಕಳು ಮೌಲ್ಯ ಶಿಕ್ಷಣ ಪಡೆದಂತಾಗುತ್ತದೆ. ಅಲ್ಲದೇ ನಾಳಿನ ಸತ್ಪ್ರಜೆಗಳಾಗಿ ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ ಎಂದರು.

ಪ್ರಾಂಶುಪಾಲ ಡಾ.ಜಿ.ಬಿ.ಬೋರಯ್ಯ ಕಾರ್ಯಕ್ರಮ ಉದ್ಘಾಟಿಸಿ, ಮಾನವೀಯ ಮೌಲ್ಯಗಳು ಇಲ್ಲದ ಶಿಕ್ಷಣ, ಶಿಕ್ಷಣವೇ ಅಲ್ಲ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಮಾತನಾಡಿ, ದತ್ತಿ ಕಾರ್ಯಕ್ರಮದ ವಿಶೇಷ ಉಪನ್ಯಾಸ ಸಂಚಿಕೆಯಲ್ಲಿ 28 ಕಾರ್ಯ ಕ್ರಮಗಳು ಮುಗಿದಿದ್ದು, ಶರಣ ಸಂಸ್ಕೃತಿಯನ್ನು ಶಾಲಾ-ಕಾಲೇಜುಗಳ ಮಕ್ಕಳಿಗೆ ತಲುಪಿಸುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದ್ದು, ಇದರ ಸದುಪ ಯೋಗ ಪಡೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್, ಎ.ಆರ್.ಜಿ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಭರಮಣ್ಣ ಮೈಸೂರು, ಖಜಾಂಚಿ ಆರ್.ಸಿದ್ದೇಶ, ಬುಳ್ಳಾಪುರದ ಮಲ್ಲಿಕಾರ್ಜುನ ಸ್ವಾಮಿ, ಕುಸುಮಾ ಲೋಕೇಶ್ ಹಾಗೂ ಪ್ರೊ. ಅನಿತಾಕುಮಾರಿ, ಪ್ರೊ ಆನಂದ, ಪ್ರೊ ಪರಶುರಾಮ, ಡಾ. ಚಮನ್‌ಸಾಬ್, ಕವಿತಾ ಪಾಟೀಲ, ರೇಖಾ, ಕಛೇರಿ ಅಧೀಕ್ಷಕ ಕರಿಬಸಪ್ಪ ಉಪಸ್ಥಿತರಿದ್ದರು. ರಮೇಶ್ ಪೂಜಾರ್ ಸ್ವಾಗತಿಸಿದರು. ಪ್ರೊ ರಶ್ಮಿ ವಂದಿಸಿದರು. ಡಾ. ಹೆಚ್.ಆರ್. ತಿಪ್ಪೇಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

## 'ಕರುನಾಡ ಪದ್ಮಶ್ರೀ' ಪ್ರಶಸ್ತಿಗೆ ಮಂಜಯ್ಯ ಚಾವಡಿ ಆಯ್ಕೆ



ರಾಣೇಬೆನ್ನೂರು, ಅ.24- ಗೋವಾದ ಬಿಚ್ಚುಲಿಯ ಹೀರಾಬಾಯಿ ಸಭಾಂಗಣದಲ್ಲಿ ಇದೇ ದಿನಾಂಕ 27ರಂದು ನಡೆಯಲಿರುವ 15ನೇ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನದ ಅಂಗವಾಗಿ, ಸಾಮಾಜಿಕ ಮತ್ತು ಧಾರ್ಮಿಕ ಸೇವೆಗೆ ನೀಡುವ 'ಕರುನಾಡ ಪದ್ಮಶ್ರೀ' ಪ್ರಶಸ್ತಿಗೆ ತಾಲ್ಲೂಕಿನ ಸಣ್ಣಸಂಗಾಪುರದ ಮಂಜಯ್ಯ ಚಾವಡಿ ಆಯ್ಕೆಯಾಗಿದ್ದಾರೆ.

ಗೋವಾದ ಬಿಚ್ಚುಲಿ ಕರ್ಮಭೂಮಿ ಕನ್ನಡ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಕರ್ನಾಟಕ ಜಾಗೃತಿ ವೇದಿಕೆ ಸಂಯುಕ್ತ ಆಶ್ರಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಪ್ರಶಸ್ತಿ ಪ್ರದಾನ ಮಾಡುವರು ಎಂದು ಜಾಗೃತಿ ವೇದಿಕೆ ಸಂಚಾಲಕ ಮಹೇಶ್ ಬಾಬು ಸುರವೇ ತಿಳಿಸಿದ್ದಾರೆ.

## ಜಿಲ್ಲೆಗೆ ಇಂದು ಸಚಿವ ಕೃಷ್ಣ ಭೈರೇಗೌಡ



ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಜಿಲ್ಲೆಗೆ ಇಂದು ಆಗಮಿಸಿ, ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸುವರು.

## ವಿನೋಬನಗರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ



ದಾವಣಗೆರೆ, ಅ. 24 - ಇಲ್ಲಿನ ವಿನೋಬನಗರದ 16ನೇ ವಾರ್ಡ್ ಚೌಡೇಶ್ವರಿ ದೇವಸ್ಥಾನದಿಂದ ಬಿಜೆಪಿಯ ಸದಸ್ಯತ್ವ ಅಭಿಯಾನ ನಡೆಸಲಾಯಿತು.

ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ್ ಕಡ್ಲೇಬಾಳು, ಜಿಲ್ಲಾ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಮತ್ತು ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಹೆಚ್. ದಿವಾಕರ್, ಉತ್ತರ ಸಹ ಸಂಚಾಲಕ ಮುಕುಂದಪ್ಪ, ಉತ್ತರ ಕಾರ್ಯದರ್ಶಿ ಶಾಮನೂರು ರಾಜು, ಸಹ ಸಂಚಾಲಕ ಜಯಣ್ಣ, ವಾರ್ಡಿನ ಮಹಿಳಾ ಪ್ರಮುಖರಾದ ಶ್ರೀಮತಿ ಗೌರಮ್ಮ ಪಾಟೀಲ್, ತಿಪ್ಪೇಶ್, ಕಟ್ಟಿಗೆ ಡಿಪೋ ಮಂಜಣ್ಣ, ಸಿದ್ದೇಶ್, ಸವಿತಾ ರವಿಕುಮಾರ್ ಹಾಗೂ ಇತರರು ಭಾಗವಹಿಸಿದ್ದರು.

## ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಗೆ ನಾಳೆ ಸ್ಪರ್ಧಾತ್ಮಕ ಪರೀಕ್ಷೆ

ದಾವಣಗೆರೆ, ಅ.24 ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯ ನೇಮಕಾತಿಗೆ ನಾಡಿದ್ದು ದಿನಾಂಕ 26 ಮತ್ತು 27 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಸೂಚಿಸಿದರು.

ಅವರು ಗುರುವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಪರೀಕ್ಷಾ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ನಾಡಿದ್ದು 26 ರಂದು 5 ಕೇಂದ್ರಗಳಲ್ಲಿ ಮತ್ತು ದಿನಾಂಕ 27 ರಂದು 38 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಉಪವಿಭಾಗಾಧಿಕಾರಿ ಸಂತೋಷ್ ಪಾಟೀಲ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ಹುಸಿ ಬಾಂಬ್ ಬೆದರಿಕೆ : ಮಾಹಿತಿ ನೀಡಲು ಜಾಲತಾಣಗಳಿಗೆ ಸೂಚನೆ

ನವದೆಹಲಿ. ಅ. 24 - ಸಾಮಾಜಿಕ ಮಾಧ್ಯಮಗಳಾದ ಮೆಟಾ ಹಾಗೂ ಎಕ್ಸ್‌ಗಳು ವಿಮಾನಯಾನ ಸಂಸ್ಥೆಗಳಿಗೆ ಬರುತ್ತಿರುವ ಹುಸಿ ಬಾಂಬ್ ಬೆದರಿಕೆ ಕುರಿತು ಮಾಹಿತಿ ಹಂಚಿಕೊಳ್ಳಬೇಕು. ಈ ರೀತಿಯ ಚಟುವಟಿಕೆ ನಡೆಸುವವರ ಹಿಂದಿರುವವರ ಗುರುತಿಸಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ 11 ದಿನಗಳಲ್ಲಿ ನೂರಾರು ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಬೆದರಿಕೆ ಎದುರಾಗಿದೆ. ಇದರಿಂದಾಗಿ ಸಾವಿರಾರು ಪ್ರಯಾಣಿಕರು ಸಮಸ್ಯೆ ಎದುರಿಸುವ ಜೊತೆಗೆ, ವಿಮಾನಯಾನ ಸಂಸ್ಥೆಗಳಿಗೆ ನೂರಾರು ಕೋಟಿ ರೂ.ಗಳ ನಷ್ಟವಾಗಿದೆ.

ಈ ಬೆದರಿಕೆ ಹಾಕಿದ ಕೆಲವರನ್ನು ಗುರುತಿಸಲಾಗಿದೆ ಹಾಗೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

## ಮಲೇಬೆನ್ನೂರಿನಲ್ಲಿ ನಾಳೆ ಶಿಬಿರ

ಮಲೇಬೆನ್ನೂರು, ಅ.24- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಾಳೆ ದಿನಾಂಕ 26ರ ಶನಿವಾರ ಬೆಳಗ್ಗೆ 10.30 ರಿಂದ ಮಧ್ಯಾಹ್ನ 3 ರವರೆಗೆ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ಶ್ರೀ ವೀರಭದ್ರೇಶ್ವರ ಚಾರಿಟಬಲ್ ಟ್ರಸ್ಟ್ ಹಾಗೂ ಕಡ್ಲಿ ಐವಿಎಫ್ ಸೆಂಟರ್, ದಾವಣಗೆರೆ ಇವರ ವತಿಯಿಂದ ಬಂಜೆತನ ನಿವಾರಣಾ ಕುರಿತು ಉಚಿತ ಸಮಾಲೋಚನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ತಿಳಿಸಿದ್ದಾರೆ.

## ಬಾಂಗ್ಲಾ : ಅವಾಮಿ ಲೀಗ್ ವಿದ್ಯಾರ್ಥಿ ಸಂಘಟನೆ ಮೇಲೆ ನಿಷೇಧ

ಢಾಕಾ, ಅ. 24 - ಪದಚ್ಯುತ ಪ್ರಧಾನಮಂತ್ರಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ವಿದ್ಯಾರ್ಥಿ ಸಂಘಟನೆಯಾದ ಬಾಂಗ್ಲಾ ದೇಶ ಛಾತ್ರ ಲೀಗ್ (ಬಿ.ಸಿ.ಎಲ್.) ಮೇಲೆ ಬಾಂಗ್ಲಾ ದೇಶದ ಹಂಗಾಮಿ ಸರ್ಕಾರ ನಿಷೇಧ ಹೇರಿದೆ.

ಈ ಸಂಘಟನೆಯು ಸಾರ್ವಜನಿಕ ಸುರಕ್ಷತೆಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ಭಾಗಿಯಾಗಿದೆ. ಅತ್ಯಾಚಾರ, ಕೊಲೆ, ಹಿಂಸೆ, ಪೀಡನೆ ಹಾಗೂ ಟೆಂಡರ್ ತಿರುಚುವಿಕೆ ಇತ್ಯಾದಿಗಳಲ್ಲಿ ಭಾಗಿಯಾಗಿದೆ.

ಈ ಹಿನ್ನೆಲೆಯಲ್ಲಿ ಉಗ್ರವಾದ ವಿರೋಧಿ ಕಾಯ್ದೆ ಅನ್ವಯ ಸಂಘಟನೆ ಮೇಲೆ ನಿಷೇಧ ಹೇರಲಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಚನ್ನಗಿರಿ: ಇಂದು ಕನ್ನಡ ರಥ ಯಾತ್ರೆ

ಸಕ್ಕರೆಯ ನಾಡು, ಅಕ್ಕರೆಯ ಬೀಡು ಮಂಡ್ಯದಲ್ಲಿ ನಡೆಯಲಿರುವ 87 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಭುವನೇಶ್ವರಿ ಕನ್ನಡ ರಥ ಯಾತ್ರೆಯು ರಾಜ್ಯಾದ್ಯಂತ ಸಂಚರಿಸುತ್ತಿದೆ.

ರಥಯಾತ್ರೆಯು ಚನ್ನಗಿರಿ ತಾಲ್ಲೂಕಿನಲ್ಲಿ ಇಂದು ಸಂಚರಿಸಲಿದ್ದು, ಮರಡಿ ಗ್ರಾಮದಿಂದ ಪ್ರಾರಂಭವಾಗಿ ಸಂತೇಬೆನ್ನೂರು - ದೇವರಹಳ್ಳಿ - ಗರಗ ಕ್ರಾಸ್ - ಚನ್ನಗಿರಿ ಪಟ್ಟಣ - ದೋಣಿಹಳ್ಳಿ - ನಲ್ಲೂರು - ಸೂಳೆಕೆರೆ - ಬಸವಾಪಟ್ಟಣ - ದಾಗಿನಕಟ್ಟೆ ಗ್ರಾಮದ ಮೂಲಕ ಹೊನ್ನಾಳಿ ತಾಲ್ಲೂಕನ್ನು ತಲುಪುವುದು ಎಂದು ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಸವಾಪಟ್ಟಣದ ಎಲ್.ಜಿ. ಮಧುಕುಮಾರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಲಯನ್ಸ್ ಸಭೆ

ದಾವಣಗೆರೆ ಲಯನ್ಸ್ ಕ್ಲಬ್‌ನ ಮಾಸಿಕ ಸಾಮಾನ್ಯ ಸಭೆಯು ಇಂದು ಸಂಜೆ 7.05ಕ್ಕೆ ಲಯನ್ಸ್ ಭವನದಲ್ಲಿ ಲಯನ್ಸ್ ಅಧ್ಯಕ್ಷ ಎಸ್. ಜಿ. ಉಳುವಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಕಾರ್ಯದರ್ಶಿ ಸಿ. ಅಜಯ್ ನಾರಾಯಣ ತಿಳಿಸಿದ್ದಾರೆ.

# ಪರಿಶಿಷ್ಠ ಜಾತಿಗಳ ವೈಜ್ಞಾನಿಕ ದತ್ತಾಂಶಗಳನ್ನು ಸಂಗ್ರಹಿಸದೇ ಒಳಮೀಸಲಾತಿ ಬೇಡ



**ಹೊನ್ನಾಳಿಯಲ್ಲಿ ಕರ್ನಾಟಕ ರಾಜ್ಯ ಬಂಜಾರ ಯುವಕರ ಮತ್ತು ವಿದ್ಯಾರ್ಥಿ ಸಂಘದ ರಾಜ್ಯಾಧ್ಯಕ್ಷ ಡಿ.ಆರ್. ಗಿರೀಶ್**

ಹೊನ್ನಾಳಿ, ಅ. 24 - ಕರ್ನಾಟಕ ರಾಜ್ಯದಲ್ಲಿರುವ ಸುಮಾರು 101 ಪರಿಶಿಷ್ಟ ಜಾತಿಗಳ ವೈಜ್ಞಾನಿಕ ದತ್ತಾಂಶಗಳನ್ನು ಸಂಗ್ರಹಿಸದೇ ಸರ್ಕಾರ ತರಾತುರಿಯಲ್ಲಿ ಒಳಮೀಸಲಾತಿ ವರ್ಗೀಕರಣ ಮಾಡಬಾರದು ಎಂದು ಕರ್ನಾಟಕ ರಾಜ್ಯ ಬಂಜಾರ ಯುವಕರ ಮತ್ತು ವಿದ್ಯಾರ್ಥಿ ಸಂಘದ ರಾಜ್ಯಾಧ್ಯಕ್ಷ ಡಿ.ಆರ್. ಗಿರೀಶ್ ಹೇಳಿದರು.

ಅವರು ಸಂಘದ ಪದಾಧಿಕಾರಿಗಳೊಂದಿಗೆ ಗುರುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಸರ್ಕಾರ ಒಳಮೀಸಲಾತಿ ವಿಚಾರದ ಬಗ್ಗೆ ಗಂಭೀರ ಚಿಂತನೆ ನಡೆಸುವ ಅವಶ್ಯಕತೆ ಇದ್ದು, ಇದನ್ನು ರಾಜಕೀಯವಾಗಿ ಬಳಸದೇ ಒಟ್ಟಾರೆಯಾಗಿ ಇಡೀ ಜನಸಮುದಾಯದ ಒಳಿತನ್ನು ಪರಿಗಣಿಸಿ ಮಾಡಬೇಕಾಗುತ್ತದೆ ಎಂದರು.

ಪರಿಶಿಷ್ಠ ಜಾತಿ ಪಟ್ಟಿಯಲ್ಲಿರುವ ವಿವಿಧ ಜನ ಸಮಾದಾಯಗಳಿಗೆ ಶಿಕ್ಷಣ ಉದ್ಯೋಗದಲ್ಲಿ ದೊರಕಿರುವ ಅವಕಾಶಗಳು, ಆರ್ಥಿಕ ಸ್ಥಿತಿಗತಿ, ರಾಜಕೀಯ ಸ್ಥಾನಮಾನ ಮತ್ತು ಸಾಮಾಜಿಕ ವ್ಯವಸ್ಥೆಯ ನಿಖರ ಅಂಕಿ-ಅಂಶಗಳನ್ನೊಳಗೊಂಡ ವೈಜ್ಞಾನಿಕವಾದ ದತ್ತಾಂಶವನ್ನು ಆಧರಿಸಿಯೇ ಒಳಮೀಸಲಾತಿ ಜಾರಿ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ 2011ರ ನಂತರ ಜನಗಣತಿಯೇ ನಡೆದಿರುವುದಿಲ್ಲ, ಜನಸಂಖ್ಯೆಯ ಪ್ರಸ್ತುತ ನಿಖರ ಮಾಹಿತಿ ಇಲ್ಲದೇ ಜನಗಣತಿ ಆಗದೇ ಏಕಾಏಕಿಯಾಗಿ ಒಳಮೀಸಲಾತಿ ಕಲ್ಪಿಸುವುದು ಸಮಂಜಸವಲ್ಲ. ಇಂತಹ ತಪ್ಪನ್ನು ಆಡಳಿತ ನಡೆಸುವ ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಮಾಡಬಾರದು ಎಂದು ಒತ್ತಾಯಿಸಿದರು.

ಮೀಸಲಾತಿ ವರ್ಗೀಕರಣವು ಪರಿಶಿಷ್ಠ ಜಾತಿಯ ಸಹೋದರ ಸಮುದಾಯಗಳ ಏಕತೆಗೆ ಧಕ್ಕೆ ತರಬಾರದು ಎಲ್ಲಾ ಪರಿಶಿಷ್ಟ ಜಾತಿಗಳ ಹಿತವನ್ನು ಕಾಪಾಡಲು ಸರ್ಕಾರ ಕಟಿ ಬದ್ಧವಾಗಿರಬೇಕು.

ನ್ಯಾಯ ಸಮ್ಮತ ಮತ್ತು ಸಂವಿಧಾನಿಕ ಅಂಶಗಳ ದೃಷ್ಟಿಯಿಂದ ಸರ್ಕಾರ ಹೊಸದಾಗಿ ಅಧ್ಯಯನ ಮಾಡಬೇಕು. ಅದಕ್ಕಾಗಿ ಎಲ್ಲಾ ಸಮುದಾಯಗಳ ಒಳಗೊಂಡ ಒಂದು ಆಯೋಗವನ್ನು ರಚಿಸಬೇಕು ಎಂದು ಆಗ್ರಹಿಸಿದರು.

ಸೂಕ್ತ ಆಧ್ಯಯನ ಮತ್ತು ಪ್ರಾತಿನಿಧ್ಯದ ಕೊರತೆ ಸಾಬೀತು ಪಡಿಸುವ ದತ್ತಾಂಶಗಳು ಲಭ್ಯವಾಗುವವರೆಗೂ ಒಳಮೀಸಲಾತಿ ವರ್ಗೀಕರಣ ಮಾಡಬಾರದು ಎಂದು ಅವರು ಸರ್ಕಾರಕ್ಕೆ ಆಗ್ರಹಿಸಿದರು.

2011ರ ಜನಗಣತಿಯಾಗಿ ಸರಿಸುಮಾರು 13 ವರ್ಷಗಳಾಗಿದ್ದು, ಈ ಅವಧಿಯಲ್ಲಿ ಎಲ್ಲಾ ಜನ ಸಮುದಾಯಗಳಲ್ಲಿ ಶೈಕ್ಷಣಿಕ ಆರ್ಥಿಕ, ಸಾಮಾಜಿಕ ಮತ್ತ ರಾಜಕೀಯ ಸ್ಥಾನಮಾನಗಳಲ್ಲಿ ಗಣನೀಯ ಬದಲಾವಣೆಗಳಾಗಿರುತ್ತವೆ. ಈ ಕಾರಣಕ್ಕೆ 2016ರಲ್ಲಿ ನಡೆಯಬೇಕಾಗಿರುವ ಜನಗಣತಿಯಲ್ಲಿ ಪಡೆದ ಅಂಕಿ ಅಂಶಗಳ ವರದಿಯ ನಂತರ ಸರ್ಕಾರ ಎಲ್ಲಾ ವಿಚಾರಗಳನ್ನು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ ಒಳಮೀಸಲಾತಿ ಕಲ್ಪಿಸುವ ನಿಟ್ಟಿನಲ್ಲಿ ಮುಂದುವರೆಯಬೇಕು ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ನ್ಯಾಮತಿ ತಾಲ್ಲೂಕು ಸಂಘದ ಅಧ್ಯಕ್ಷ ಮಂಜುನಾಯ್ಕ, ದೊಡ್ಡೇರಿ ಪ್ರಕಾಶ್ ನಾಯ್ಕ, ಪವನ್ ನಾಯ್ಕ ಉಜ್ಜನೀಪುರ, ಸೇರಿದಂತೆ ರಾಜ್ಯ ಬಂಜಾರ ಯುವಕರ ಮತ್ತು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಇದ್ದರು.

## ಡಿ.ಕೆ.ಎಸ್. ಬ್ರಿಗೇಡ್‌ನಿಂದ ಬೆಡ್ ಶೀಟ್ ವಿತರಣೆ



ದಾವಣಗೆರೆ, ಅ.24- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರ ಡಿ.ಕೆ.ಎಸ್. ಬ್ರಿಗೇಡ್ ವತಿಯಿಂದ ನಗರದ ಫುಟ್‌ಪಾತ್ ಬದಿ ಚಳಿಯಲ್ಲಿ ಮಲಗಿರುವ ನೂರಾರು ನಿರ್ವಸತಿಗರಿಗೆ ಬೆಡ್ ಶೀಟ್ ವಿತರಣೆ ಮಾಡಲಾಯಿತು. ಈ ವೇಳೆ ಡಿ.ಕೆ.ಎಸ್. ಬ್ರಿಗೇಡ್ ಅಧ್ಯಕ್ಷ ಬಕ್ಕೇಶ್ ಅಜ್ಜಂಪುರ್, ನಿಧಿಶ್ ಶೆಟ್ಟಿ, ಚೇತನ್ ಕುಮಾರ್, ಯುವರಾಜ್, ಸಾಧಿಕ್ ಮತ್ತಿತರರು ಇದ್ದರು.

**WANTED**
*Experienced Typist*
*(Kannada & English) with Shorthand skills.*
Interested Candidates may contact with your Bio data to our trust office.
**R Hanumanthappa & Son**
P.B.Road, Davangere - 577 003.
**PH: 08192-258834, 94498 28834.**

# ಹರಪನಹಳ್ಳಿ : ಅರಸೀಕೆರೆ ಹೋಬಳಿಯ ಸಮಸ್ಯೆಗಳಿಗೆ ಸ್ಪಂದಿಸಲು ಆಗ್ರಹ



**ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ ವಿದ್ಯಾರ್ಥಿ, ಯುವಜನ, ರೈತ, ದಲಿತ ಸಂಘಟನೆಗಳ ಮುಖಂಡರ ಪ್ರತಿಭಟನೆ**

ಹರಪನಹಳ್ಳಿ, ಅ. 24 - ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ತಾಲ್ಲೂಕಿನ ಅರಸೀಕೆರೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ ವಿದ್ಯಾರ್ಥಿ, ಯುವಜನ, ರೈತ, ದಲಿತ ಸಂಘಟನೆಗಳ ಮುಖಂಡರು ಗುರುವಾರ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಈ ವೇಳೆ ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾಧ್ಯಕ್ಷ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ದೊಡ್ಡ ಹೋಬಳಿಯಾಗಿದ್ದು ಹೆಚ್ಚು ಜನಸಂಖ್ಯೆ ಹೊಂದಿದೆ. ಇಲ್ಲಿ ರೈತರು, ಕೂಲಿ ಕಾರ್ಮಿಕರು, ಬಡವರು ಹೆಚ್ಚಾಗಿ ವಾಸವಾಗಿದ್ದಾರೆ, ಆದರೆ ಮೂಲಭೂತ ಸಮಸ್ಯೆಗಳು ಮಾತ್ರ ಇನ್ನು ಜೀವಂತವಾಗಿವೆ ಎಂದು ದೂರಿದರು.

ಇಲ್ಲಿ ಸರಿಯಾದ ರಸ್ತೆ, ಚರಂಡಿ, ಬಸ್ ನಿಲ್ದಾಣ, ವಿದ್ಯುತ್, ಸಾರಿಗೆ, ವಸತಿ, ವೈದ್ಯರ ಕೊರತೆಯಿಂದ ಸಾರ್ವಜನಿಕರು ನಿತ್ಯ ಪರದಾಡುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಎಸ್.ಎಂ. ಸಂತೋಷ ಮಾತನಾಡಿ, ಅರಸೀಕೆರೆ ಹೋಬಳಿ ಕೇಂದ್ರಕ್ಕೆ ವಿದ್ಯಾಭ್ಯಾಸಕ್ಕೆ ಬರುವ ವಿದ್ಯಾರ್ಥಿಗಳಿಗೆ ಇಲ್ಲಿ ವಸತಿ ನಿಲಯ ಇಲ್ಲದೇ ಪರದಾಡುವ ಪರಿಸ್ಥಿತಿ ಇದೆ, ಹೋಬಳಿ ಕೇಂದ್ರದಲ್ಲಿ ನಾಡಕಚೇರಿ ಇದ್ದು ಕಟ್ಟಡ ಶಿಥಿಲಗೊಂಡಿದೆ. ಸರಿಯಾದ ಕಟ್ಟಡವಿಲ್ಲದೆ ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ದೂರಿದರು.

**ಬೇಡಿಕೆಗಳು** : ಹರಪನಹಳ್ಳಿಯಿಂದ ಅರಸಿಕೆರೆ ಮಾರ್ಗವಾಗಿ ಉಚ್ಚಂಗಿದುರ್ಗಕ್ಕೆ ಹೋಗುವ ರಸ್ತೆ, ಕೆರೆಗುಡಿಹಳ್ಳಿಯಿಂದ ಕಬ್ಬಳ್ಳಿ, ಬೂದಿಹಾಳು, ಗಡಿಗು ಡಾಳ್, ಮಾದಿಹಳ್ಳಿ ರಸ್ತೆಯಲ್ಲಿ ದೊಡ್ಡ-ದೊಡ್ಡ ಗುಂಡಿಗಳು ಬಿದ್ದಿದ್ದು ಕೂಡಲೇ ರಸ್ತೆ ನಿರ್ಮಾಣ ಮಾಡಬೇಕು.


ಅರಸಿಕೆರೆ ಬಸ್ ನಿಲ್ದಾಣ ಕಾಮಗಾರಿ ಅಪೂರ್ಣ ಗೊಂಡಿದ್ದು, ಕೂಡಲೇ ಪೂರ್ಣಗೊಳಿಸಬೇಕು, ಅರಸಿಕೆರೆ ಯಿಂದ ಹರಪನಹಳ್ಳಿ, ವಿಜಯನಗರ ಸೇರಿದಂತೆ ವಿವಿಧ ನಗರಗಳಿಗೆ ಹೋಗಲು ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಬೇಕು.

ಎಸ್ಸಿ-ಎಸ್ಟಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಬೇಕು. ಜಗಳೂರು ವಿಧಾನಸಭಾ ಕ್ಷೇತ್ರದ 7 ಗ್ರಾಮ ಪಂಚಾಯಿತಿ ಗ್ರಾಮಗಳಿಗೆ ಆಶ್ರಯ ಮನೆಗಳನ್ನು ಶಾಸಕರು ಮಂಜೂರು ಮಾಡಿಸಬೇಕು.

ಹೋಬಳಿ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ವಿದ್ಯುತ್ ಶಕ್ತಿ ಘಟಕ ಕಾಮಗಾರಿ ಪೂರ್ಣಗೊಂಡಿದ್ದು ಶೀಘ್ರ ಪ್ರಾರಂಭಿಸಿ ರೈತರಿಗೆ ವಿದ್ಯುತ್ ಸಮಸ್ಯೆಯನ್ನು ನೀಗಿಸಬೇಕು.

ಅರಸಿಕೆರೆ ಹೋಬಳಿಯಲ್ಲಿ ಹೆಚ್ಚು ಮಳೆಯಿಂದ ಬೆಳೆಗಳು ನಾಶವಾಗಿದ್ದು, ಕೂಡಲೇ ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಬಳಿಕ ಉಪತಹಶೀಲ್ದಾರ್, ಸಮಾಜ ಕಲ್ಯಾಣ ಇಲಾಖೆ, ಲೋಕೋಪಯೋಗಿ, ಬಿಸಿಎಂ, ಆರೋಗ್ಯ, ಬೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮುಖಂಡರಾದ ಬೂದಿಹಾಳ್ ಸಿದ್ದಪ್ಪ, ಕಬ್ಬಳ್ಳಿ ಮೈಲಪ್ಪ, ಬಳಿಗಾನೂರು ಕೊಟ್ರೇಶ್, ಡಿ. ನಾಗಪ್ಪ, ಹನುಮಂತಪ್ಪ, ಬಸವರಾಜ, ಅರುಣ, ಸತ್ತೂರು ಮಹಾದೇವಪ್ಪ, ಶಿವರಾಮ, ಪುಣಬಗಟ್ಟ ಮಂಜುನಾಥ, ಮಾರುತಿ, ಪಕ್ಕೀರಪ್ಪ, ರಮೇಶ್, ಎಂ. ಬಸವರಾಜ, ಕಬ್ಬಳ್ಳಿ ರಮೇಶ್, ಪ್ರಭು, ಕಾಳೇಶ್, ಕಾಶಿ, ಗುರು, ಇರ್ಫಾನ್, ಮಂಜುನಾಥ ಸೇರಿದಂತೆ ಇತರರು ಇದ್ದರು.



**ಧನ್ವಂತರಿ ಜಯಂತಿ ಮತ್ತು ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ**

ಶರತ್ ಋತುವಿನ ಈ ತಿಂಗಳಿನಲ್ಲಿ ಮನುಷ್ಯನು ಪಿತ್ತ-ರಕ್ತ ಕಾಯಿಲೆಗೆ ಗುರಿಯಾಗುತ್ತಾನೆಂದು, ಈ ಕಾಲದಲ್ಲಿ ರಕ್ತ ಶುದ್ಧಿಯಾಗುವ ಕ್ರಿಯೆಗಳು ಮಾಡಿಸಿದ್ದಲ್ಲಿ ದೇಹವು ಆರೋಗ್ಯದಿಂದ ಮತ್ತು ಚರ್ಮವು ಕಾಂತಿಯುಕ್ತವಾಗುತ್ತೆಂದು ವಿಶ್ಲೇಷಿಸಲಾಗಿದೆ. ಈ ನಿಟ್ಟಿನಲ್ಲಿ ನಮ್ಮ ಆಸ್ಪತ್ರೆಯಲ್ಲಿ ಕೆಳಕಂಡ ಶಿಬಿರವನ್ನು ಆಯೋಜಿಸಲಾಗಿದೆ.

**ಚರ್ಮವ್ಯಾಧಿಗಳಿಗೆ ಉಚಿತ ಚಿಕಿತ್ಸಾ ಶಿಬಿರ**
ದಿನಾಂಕ 25ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ. ಸ್ಥಳ: ಅನ್ವಯ ಆಯುರ್ವೇದ ಚಿಕಿತ್ಸಾಲಯ, ತರಳಬಾಳು ಬಡಾವಣೆ.

**ಅಜೀರ್ಣ, ಹೊಟ್ಟೆಯ ತೊಂದರೆಗಳಿಗೆ ಉಚಿತ ಚಿಕಿತ್ಸಾ ಶಿಬಿರ**
ದಿನಾಂಕ 26ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ. ಸ್ಥಳ: ಅನ್ವಯ ಆಯುರ್ವೇದ ಆಸ್ಪತ್ರೆ, ಎಂ.ಸಿ.ಸಿ. 'ಎ' ಬ್ಲಾಕ್

**ಮುಟ್ಟಿನ ತೊಂದರೆಗಳಿಗೆ ಉಚಿತ ಚಿಕಿತ್ಸಾ ಶಿಬಿರ**
ದಿನಾಂಕ 27ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ. ಸ್ಥಳ: ಅನ್ವಯ ಆಯುರ್ವೇದ ಆಸ್ಪತ್ರೆ, ಎಂ.ಸಿ.ಸಿ. 'ಎ' ಬ್ಲಾಕ್

**ಸ್ವಯಂ ಪ್ರೇರಿತ ರಕ್ತದಾನ ಶಿಬಿರ**
ದಿನಾಂಕ 28ನೇ ಅಕ್ಟೋಬರ್, 2024,
ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ.

**ಲೋಕ ಕಲ್ಯಾಣಾರ್ಥವಾಗಿ ಧನ್ವಂತರಿ ಹೋಮ**
ದಿನಾಂಕ 29ನೇ ಅಕ್ಟೋಬರ್, 2024, ಮಂಗಳವಾರದಂದು

ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**
#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಮೊ: 86186 42929, 63643 21664, ಫೋ. : 08192 252228
ವಿ.ಸೂ.: ವೈದ್ಯರು ಏನಾದರೂ ಚಿಕಿತ್ಸೆ ಸೂಚಿಸಿದರೆ ಶೇ.30 ರಷ್ಟು ರಿಯಾಯಿತಿ ನೀಡಲಾಗುತ್ತದೆ.

## ರಾಜ್ಯ ಮಟ್ಟದ ವೇಯ್ಟ್ ಲಿಫ್ಟಿಂಗ್ ಕ್ರೀಡಾಕೂಟಕ್ಕೆ ಪ್ರಶಾಂತ್ ಆಯ್ಕೆ



ದಾವಣಗೆರೆ, ಅ. 24- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ತುರ್ಚಘಟ್ಟ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ನಿನ್ನೆ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ದಾವಣಗೆರೆ ದಕ್ಷಿಣದಿಂದ ವೇಯ್ಟ್ ಲಿಫ್ಟಿಂಗ್‌ನಲ್ಲಿ ಸ್ಪರ್ಧಿಸಿದ್ದ ಡಿಆರ್‌ಆರ್ ಶಾಲೆಯ ವಿದ್ಯಾರ್ಥಿ ಎಂ. ಪ್ರಶಾಂತ್ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ನಾಳೆ ದಿನಾಂಕ 25 ಮತ್ತು 26 ರಂದು ಮಂಗಳೂರಿನ ವಿಟ್ಲದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ತೆರಳಿದ್ದು, ಈ ವಿದ್ಯಾರ್ಥಿ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಪಾಲಿಕೆ ವಾಹನ ಚಾಲಕ ಮಂಜಪ್ಪ ಇವರ ಪುತ್ರ.

ಪ್ರಶಾಂತ್ ರಾಜ್ಯಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡಲೆಂದು ಅಂತರರಾಷ್ಟ್ರೀಯ ಕ್ರೀಡಾಪಟು, ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ.ವಿನಯ್ ಕುಮಾರ್, ವೇಯ್ಟ್ ಲಿಫ್ಟಿಂಗ್ ಸಂಸ್ಥೆ ಅಧ್ಯಕ್ಷ ಬಸವರಾಜ್, ತರಬೇತುದಾರರಾದ ಹನುಮಂತ, ಸಂತೋಷ್ ಕಾಟೆ, ರಾಘವೇಂದ್ರ ಅಭಿನಂದಿಸಿದ್ದಾರೆ.

## ಕಿತ್ತೂರು ಉತ್ಸವದ ಸುಗಮ ಸಂಗೀತ ಕಾರ್ಯಕ್ರಮಕ್ಕೆ ಚಿಂದೋಡಿ ಆಯ್ಕೆ



ದಾವಣಗೆರೆ, ಅ.24- ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ನಾಳೆ ದಿನಾಂಕ 25ರ ಶುಕ್ರವಾರ ಸಂಜೆ 5 ಗಂಟೆಗೆ ನಡೆಯಲಿರುವ ಕಿತ್ತೂರು ಉತ್ಸವದಲ್ಲಿ ಹಿರಿಯ ರಂಗಭೂಮಿ ಕಲಾವಿದ ಚಿಂದೋಡಿ ಶಂಭುಲಿಂಗಪ್ಪ ಸುಗಮ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಕಿತ್ತೂರು ರಾಣಿ ಚನ್ನಮ್ಮನ ಜಯಂತ್ಯೋತ್ಸವ ಮತ್ತು ವಿಜಯೋತ್ಸವದ ಅಂಗವಾಗಿ ಆಚರಿಸುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮ ಉತ್ಸವದ ನಿಮಿತ್ತ ಕರ್ನಾಟಕದ ಹೆಸರಾಂತ ಸುಗಮ ಸಂಗೀತ ಹಾಗೂ ನಾಟಕ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿರುವ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆಯ ಹೆಸರಾಂತ ಗಾಯಕ-ಗಾಯಕಿಯರಾದದ ಶ್ರೀಮತಿ ಲಕ್ಷ್ಮಿ ಹಾಗೂ ಸುನಿತಾ, ಪ್ರಕಾಶ್, ಮಹಾಂತೇಶ್, ಕಲಾವಿದರ ಸಂಘದ ಅಧ್ಯಕ್ಷ ಬಿ.ಕೆ. ಗಣೇಶ್ ಅವರ ಸಾರಥ್ಯದಲ್ಲಿ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ.

## ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಸಂಜೀವ್ ಖನ್ನಾ



ನವದೆಹಲಿ, ಅ. 24 - ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರನ್ನು ಸುಪ್ರೀಂ ಕೋರ್ಟ್‌ನ 51ನೇ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಹಾಲಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ನವೆಂಬರ್ 10 ನಿವೃತ್ತರಾಗಲಿದ್ದಾರೆ. ಸಂಜೀವ್ ಖನ್ನ ಅವರು ನವೆಂಬರ್ 11ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅವರು ಮೇ 13, 2025 ರಂದು ನಿವೃತ್ತರಾಗಲಿದ್ದಾರೆ. ಅವರ ಕಾಲಾವಧಿ ಆರು ತಿಂಗಳಷ್ಟಿರಲಿದೆ.

## ಬೆಂಚ್‌ಪ್ರೆಸ್ : ಕರ್ನಾಟಕಕ್ಕೆ ದ್ವಿತೀಯ ಸ್ಥಾನ




ದಾವಣಗೆರೆ, ಅ.24- ಗೋವಾ ರಾಜ್ಯದ ವಾಸ್ಕೋಡಿಗಾಮದಲ್ಲಿ ಕಳೆದ ವಾರ ನಡೆದ ರಾಷ್ಟ್ರಮಟ್ಟದ ಪುರುಷರ ಹಾಗೂ ಮಹಿಳೆಯರ ಬೆಂಚ್‌ಪ್ರೆಸ್ ಚಾಂಪಿಯನ್ ಸ್ಪರ್ಧೆಯ ಕ್ಲಾಸಿಕ್ ಬೆಂಚ್‌ಪ್ರೆಸ್ ಸ್ಪರ್ಧೆಯಲ್ಲಿ ಕರ್ನಾಟಕ ತಂಡಕ್ಕೆ ದ್ವಿತೀಯ ಸ್ಥಾನ ಲಭಿಸಿದೆ.

ತಂಡದಲ್ಲಿ ಪ್ರಥಮ ಸ್ಥಾನವನ್ನು ರಾಜಸ್ತಾನ, ದ್ವಿತೀಯ ಸ್ಥಾನವನ್ನು ಕರ್ನಾಟಕ ಹಾಗೂ ತೃತೀಯ ಸ್ಥಾನವನ್ನು ಮಹಾರಾಷ್ಟ್ರ ಪಡೆದುಕೊಂಡಿವೆ.

ಕರ್ನಾಟಕ ತಂಡದ ತೀರ್ಪುಗಾರರಾದ ನಗರದ ಎಂ. ಮಹೇಶ್ವರಯ್ಯ ಅವರು ಪವರ್‌ಲಿಫ್ಟಿಂಗ್‌ನಲ್ಲಿ ಜೀವಮಾನದ ಪ್ರಶಸ್ತಿ ವಿಜೇತರಾಗಿರುತ್ತಾರೆ. ಸ್ಟ್ರಾಂಗ್ ಮ್ಯಾನ್ ಆಫ್ ಏಷ್ಯಾ ಪ್ರಶಸ್ತಿ ವಿಜೇತರು ಹಾಗು ರಾಷ್ಟ್ರೀಯ ಕೆಟಗರಿ -1 ತೀರ್ಪುಗಾರರು ಎಂಬ ಹೆಗ್ಗಳಿಕೆಗೆ ಪಾತ್ರರಾದ ಮಹೇಶ್ವರಯ್ಯ ಅವರನ್ನು ಬೀರೇಶ್ವರ ವ್ಯಾಯಾಮ ಶಾಲೆಯ ಗ್ರೂಪ್ ಆಫ್ ಐರನ್ ಗೇಮ್ಸ್, ನಗರಸಭೆ ವ್ಯಾಯಾಮ ಶಾಲೆಯ ಎಲ್ಲಾ ಹಿರಿಯ, ಕಿರಿಯ ಕ್ರೀಡಾಪಟುಗಳು ಅಭಿನಂದಿಸಿದ್ದಾರೆ.

## ವಸತಿ ಯೋಜನೆ: ಅರ್ಜಿ ಆಹ್ವಾನ

ದಾವಣಗೆರೆ, ಅ. 24 - ದಾವಣಗೆರೆ ಪಾಲಿಕೆ ವ್ಯಾಪ್ತಿಯಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಮನೆ ನಿರ್ಮಿಸಿಕೊಳ್ಳುವ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರ ವ್ಯಾಪ್ತಿಯಲ್ಲಿರುವ ಶಿಥಿಲವಾಗಿರುವ ಮನೆಗಳು ಹಾಗೂ ಖಾಲಿ ನಿವೇಶನ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

## ಕಾಯಿಸಿ ಆರಿಸಿದ ನೀರು ಕುಡಿಯಲು ಸಲಹೆ

ಹರಿಹರ, ಅ.24 - ಕವಲೆತ್ತು ಗ್ರಾಮದ ಬಳಿ ತುಂಗ ಭದ್ರಾ ನದಿ ನೀರಿನ ಹರಿವು ಹೆಚ್ಚಾಗಿರುವುದರಿಂದ ನದಿ ನೀರು ಕೆಸರು ಮಿಶ್ರಿತವಾಗಿರುತ್ತದೆ.

ಹರಿಹರ

ನದಿಯಿಂದ ನಗರಕ್ಕೆ ಕುಡಿಯುವ ನೀರು ಪೂರೈಸುತ್ತಿರುವ ಕಾರಣ ಸಾರ್ವಜನಿಕರು ನೀರನ್ನು ನೇರವಾಗಿ ಕುಡಿಯದೇ, ಕುದಿಸಿ, ಆರಿಸಿದ ನಂತರ ಕುಡಿಯಬೇಕೆಂದು ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಕೇಂದ್ರ ಶಿಕ್ಷಣ ಸಚಿವಾಲಯದ ಸಲಹಾ ಸಮಿತಿಯ ಸದಸ್ಯರಾಗಿ ಡಾ.ಪ್ರಭಾ



ದಾವಣಗೆರೆ, ಅ. 24 - ಕೇಂದ್ರ ಸರ್ಕಾರವು ಶಿಕ್ಷಣ ಸಚಿವಾಲಯಕ್ಕಾಗಿ ಸಲಹಾ ಸಮಿತಿಯನ್ನು ರಚಿಸಿದ್ದು, ಈ ಸಮಿತಿಗೆ ಸದಸ್ಯರಾಗಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ನೇಮಕಗೊಂಡಿದ್ದಾರೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಶಿಕ್ಷಣ ಸಚಿವಾಲಯದ ರಾಜ್ಯ ಸಚಿವ ಜಯಂತ್ ಚೌಧರಿ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯದ ರಾಜ್ಯ ಸಚಿವ ಡಾ. ಸುಕಾಂತ ಮಜುಂದಾರ್ ಅವರುಗಳು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಡಾ.ಪ್ರಭಾ ಅವರು ಆರೋಗ್ಯ ಸಮಿತಿ ಜೊತೆಯಲ್ಲಿ ಶಿಕ್ಷಣ ಸಮಿತಿಗೂ ಸದಸ್ಯರಾಗಿದ್ದಾರೆ.

## ನ್ಯಾಯದೇವತೆ, ಚಿಹ್ನೆ ಬದಲಾವಣೆಗೆ ವಕೀಲರ ಒಕ್ಕೂಟದ ಆಕ್ಷೇಪ



ನವದೆಹಲಿ, ಅ. 24 - ನ್ಯಾಯ ದೇವತೆ ಮೂರ್ತಿ ಹಾಗೂ ಸುಪ್ರೀಂ ಕೋರ್ಟ್‌ನ ಚಿಹ್ನೆಗಳಲ್ಲಿ ತೀವ್ರ ಬದಲಾವಣೆ ಮಾಡಿರುವುದಕ್ಕೆ ಸುಪ್ರೀಂ ಕೋರ್ಟ್ ವಕೀಲರ ಒಕ್ಕೂಟ ಆಕ್ಷೇಪಿಸಿದೆ.

ನ್ಯಾಯಮೂರ್ತಿಗಳ ಗ್ರಂಥಾಲಯದಲ್ಲಿ ಆರು ಅಡಿಗಳ ನ್ಯಾಯದೇವತೆಯ ಹೊಸ ಮೂರ್ತಿ ಸ್ಥಾಪಿಸಲಾಗಿದೆ. ಮೂರ್ತಿ ಒಂದು ಕೈಯಲ್ಲಿ ತಕ್ಕಡಿ ಹಾಗೂ ಇನ್ನೊಂದು ಕೈಯಲ್ಲಿ ಸಂವಿಧಾನ ಇದೆ. ಮೂರ್ತಿಯ ಕಣ್ಣು ತೆರೆಯಲಾಗಿದೆ. ಆದರೆ, ಈ ಹಿಂದಿನ ಮೂರ್ತಿಯಲ್ಲಿ ಒಂದು ಕೈಯಲ್ಲಿ ಸಂವಿಧಾನದ ಬದಲು ಖಡ್ಗ ಇತ್ತು. ಮೂರ್ತಿಯ ಕಣ್ಣಿಗೆ ಬಟ್ಟೆ ಕಟ್ಟಲಾಗಿತ್ತು.

ಸುಪ್ರೀಂ ಕೋರ್ಟ್ ವಕೀಲರ ಒಕ್ಕೂಟದ ಅಧ್ಯಕ್ಷ ಕಪಿಲ್ ಸಿಬಾಲ್ ಅವರ ಸಹಿಯುಳ್ಳ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದ್ದು, ಸಂಘದ ಜೊತೆ ಚರ್ಚಿಸದೇ ಬದಲಾವಣೆ ಮಾಡಲಾಗಿದೆ ಎಂದು ಆಕ್ಷೇಪಿಸಲಾಗಿದೆ.

## ನ.16ರಂದು ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಚುನಾವಣೆ

ದಾವಣಗೆರೆ,ಅ. 24- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಕಾರ್ಯಕಾರಿ ಸಮಿತಿ ನಿರ್ದೇಶಕರ ಚುನಾವಣೆ ನವೆಂಬರ್ 16ರಂದು ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ಸರ್ಕಾರಿ ಬಾಲಕರ ಪದವಿ-ಪೂರ್ವ ಕಾಲೇಜಿನಲ್ಲಿ ನಡೆಯಲಿದೆ. ಇದೇ ದಿನಾಂಕ 28 ರಿಂದ ನವೆಂಬರ್ 7ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ನವೆಂಬರ್ 8 ರಂದು ನಾಮಪತ್ರಗಳ ಪರಿಶೀಲನೆ, ನ.11 ರಂದು ಉಮೇದುವಾರಿಕೆ ವಾಪಸ್ ಪಡೆಯಲು ಕೊನೆಯ ದಿನವಾಗಿದೆ ಎಂದು ಚುನಾವಣಾಧಿಕಾರಿ ಜಿ.ಹಾಲೇಶಪ್ಪ ತಿಳಿಸಿದ್ದಾರೆ.















KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas